ಜುಲೈ 2023 ಸಂಪುಟ 19
ಸಂಚಿಕೆ 07
ಸಂಚಿಕೆ ಬೆಲೆ ರೂ. 1/-

ಬಂಟರ ಸಂಘ ಬೆಂಗಳೂರು
BUNTS' SANGHA BANGALORE
www.buntsanghablr.com

# ಸ್ನೇಹ ಚಿಂತನೆ

ಮಾಸ ಪತ್ರಿಕೆ




ಮಹಿಳಾ ವಿಭಾಗದ ವತಿಯಿಂದ ಅಂತಾರಾಷ್ಟ್ರೀಯ ಯೋಗ ದಿನಾಚರಣೆ




Pre Primary Parent Orientation Programme-2023-24




ಯಕ್ಷಗಾನ ಮತ್ತು ರಂಗತರಬೇತಿ ಸಮಿತಿ-2023-24ನೇ ಸಾಲಿನ ಮಕ್ಕಳ ಯಕ್ಷಗಾನ ತರಬೇತಿಯ ಪ್ರಾರಂಭ




BSRNSV Environment Day

324, Chord Road, Vijayanagara
Bengaluru - 560 040.
Ph: 080 2339 9323/ 2339 9635
E: info@buntsanghablr.com

# ಎಡ್ಡೆಪ್ಪುಲು ★ ಅಭಿನಂದನೆಗಳು

## ತುಳುಕೂಟ ಬೆಂಗಳೂರು (ರಿ.) ದ

### 2023-2025 ಸಾಲ್‌ದ್ದ ಪೊಸತ್ ಆದ್ ಆಯ್ಕೆಆಯಿನ
### ಗುರ್ಕಾರ್ರ್ ಬೊಕ್ಕ ಪ್ರಧಾನ ಕಾರ್ಯಂತೆರ್



**ಶ್ರೀ ಸುಂದರ್ ರಾಜ್ ರೈ**
ಅಧ್ಯಕ್ಷರು



**ಶ್ರೀ ಅಜಿತ್ ಹೆಗ್ಡೆ ಕೆ.**
ಪ್ರಧಾನ ಕಾರ್ಯದರ್ಶಿ

**ತುಳು ಕೂಟ ಬೆಂಗಳೂರಿಗೆ 50 ವರ್ಷ ತುಂಬಿದ ಈ ಶುಭ ಸಂದರ್ಭದಲ್ಲಿ ಅವಿರೋಧವಾಗಿ ಆಯ್ಕೆಯಾದ ನೂತನ ಅಧ್ಯಕ್ಷರು ಹಾಗೂ ಪ್ರಧಾನ ಕಾರ್ಯದರ್ಶಿಗಳಿಗೆ ಹಾರ್ದಿಕ ಶುಭ ಕೋರುವ,**

**ಶ್ರೀ ಆನಂದರಾಮ ಶೆಟ್ಟಿ ಬಿ.**
ಗೌ॥ ಕಾರ್ಯದರ್ಶಿ
ಬಂಟರ ಸಂಘ ಬೆಂಗಳೂರು

**ಶ್ರೀ ಎಚ್. ಶಂಕರ್ ಶೆಟ್ಟಿ**
ವಕೀಲರು, ಬೆಂಗಳೂರು.

**ಶ್ರೀ ರವಿರಾಜ್ ಎಸ್. ಶೆಟ್ಟಿ**
ನಿಕಟಪೂರ್ವ ಅಧ್ಯಕ್ಷರು
ಕನ್ನಡ ಕರಾವಳಿ ವೇದಿಕೆ, ಬೆಂಗಳೂರು

**ಶ್ರೀ ಸಂತೋಷ್ ಶೆಟ್ಟಿ**
ಮಾಜಿ ಖಜಾಂಚಿ
ಬಂಟರಸಂಘ ಬೆಂಗಳೂರು

ADVT.

# ಸ್ನೇಹ ಚಿಂತನೆ

*Monthly Magazine Published by*

**BUNTS' SANGHA BANGALORE**

**VOL 19** **JULY 2023** **ISSUE 07**

**ಸಾಹಿತ್ಯ ಮತ್ತು ಪ್ರಕಾಶನ ಸಮಿತಿ**
ಚೇರ್‌ಪರ್ಸನ್ ಮತ್ತು ಗೌ॥ ಸಂಪಾದಕರು :
ಶ್ರೀ ಅರವಿಂದ ಶೆಟ್ಟಿ ಎಂ.

**ಸಹ ಸಂಪಾದಕರು :**
ಶ್ರೀ ಸತ್ಯಾನಂದ ಮೇಲಾಂಟ ಎನ್.

**ಸಂಪಾದಕ ಮಂಡಳಿ :**
ಶ್ರೀ ಸತೀಶ್ ಶೆಟ್ಟಿ ವಕ್ವಾಡಿ
ಶ್ರೀಮತಿ ಜಯಲಕ್ಷ್ಮೀ ಸಿ. ಶೆಟ್ಟಿ
ಶ್ರೀಮತಿ ಶ್ಯಾಮಲ ಶೆಟ್ಟಿ
ಶ್ರೀಮತಿ ನಿರ್ಮಲಾ ಸಿ. ರೈ
ಡಾ। ಶಾಲ್ಮಲೀ ಸುರೇಶ್
ಶ್ರೀ ರವೀಂದ್ರ ಶೆಟ್ಟಿ ಹಟ್ಟಿಯಂಗಡಿ
ಶ್ರೀಮತಿ ಆರತಿ ಸುರೇಶ್ ಶೆಟ್ಟಿ
ಶ್ರೀಮತಿ ಅನುಷಾ ಶೆಟ್ಟಿ
ಶ್ರೀ ಪ್ರದೀಪ್ ಕುಮಾರ್ ಹೆಗ್ಡೆ
ಶ್ರೀ ಜಯರಾಮ ಶೆಟ್ಟಿ, ನೂಜಾಡಿ
ಶ್ರೀ ಪ್ರಕಾಶ್ ರೈ
ಶ್ರೀ ಪ್ರದೀಪ್‌ರಾಜ್ ಶೆಟ್ಟಿ

**ಪೋಷಕ ಸದಸ್ಯರು :**
ಶ್ರೀಮತಿ ಮನೋರಮ ಚೌಟ
ಶ್ರೀಮತಿ ವೇದ ಎಸ್. ಶೆಟ್ಟಿ
ಶ್ರೀ ಬಿ. ಕುಸುಮಾಕರ ಶೆಟ್ಟಿ
ಶ್ರೀ ಆರ್.ಎಸ್. ಶೆಟ್ಟಿ
ಶ್ರೀಮತಿ ವಸಂತಿ ಪಿ. ಶೆಟ್ಟಿ
ಶ್ರೀ ಪ್ರಕಾಶ್ ಶೆಟ್ಟಿ
ಶ್ರೀ ಎ.ಜೆ. ಶೆಟ್ಟಿ
ಶ್ರೀಮತಿ ಗೀತ ಭಗವಾನ್‌ದಾಸ್ ರೈ
ಶ್ರೀ ಶ್ರೀನಿವಾಸ ಸೂಡ

**ಪ್ರಕಾಶಕರು :**
ಶ್ರೀ ಆನಂದರಾಮ ಶೆಟ್ಟಿ ಬಿ.

ಈ ಸಂಚಿಕೆಯಲ್ಲಿ ಪ್ರಕಟವಾದ ಲೇಖನಗಳಲ್ಲಿನ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದ್ದು, ಇದರಲ್ಲಿ ಬಂಟರ ಸಂಘಕ್ಕೆ ಯಾವುದೇ ತೆರನಾದ ಜವಾಬ್ದಾರಿ ಇರುವುದಿಲ್ಲ. **– ಸಂಪಾದಕ ಮಂಡಳಿ**

## ಒಳ ಪುಟಗಳಲ್ಲಿ.....

| | ಪುಟ |
|---|---|
| ಸಂಪಾದಕೀಯ | 2 |
| ಅಧ್ಯಕ್ಷರ ಮಾತು | 3 |
| ಗೌರವ ಕಾರ್ಯದರ್ಶಿಗಳ ವರದಿ | 4 |
| ಬಂಟರ ಅಸ್ಮಿತೆಯನ್ನು ಬೆಂಗಳೂರಲ್ಲೂ ಉಳಿಸಿ ಯಶಸ್ಸು ಕಂಡ ಇರ್ಮಾಡಿ ಜಯಪ್ರಸಾದ ಶೆಟ್ಟಿ. | 5 |
| SHE / HER:- | 8 |
| Bunts' Sangha R.N.S. Vidyaniketan Pre Primary Parent Orientation Programme 2023-24 | 9 |
| Bunts Sangha R.N.S. Vidyaniketan Environment Day Celebration-2023 | 10 |
| ಬಂಟರ ಸಂಘ ಬೆಂಗಳೂರು –ಮಹಿಳಾ ವಿಭಾಗ ಅಂತಾರಾಷ್ಟ್ರೀಯ ಯೋಗ ದಿನಾಚರಣೆ | 11 |
| ಯಕ್ಷಗಾನ ಮತ್ತು ರಂಗ ತರಬೇತಿ ಸಮಿತಿ – ಮಕ್ಕಳ ಯಕ್ಷಗಾನ ತರಬೇತಿ ತರಗತಿಯ ಪ್ರಾರಂಭ | 12 |
| Bunts Sangha R.N.S. Vidyaniketan And Composite PU College I P.U.C. Inaugural Function | 13 |
| ವೈದ್ಯಕೀಯ ವಿಭಾಗ ಮತ್ತು ವಿಮೆ – ಆರೋಗ್ಯ ತಪಾಸಣಾ ಶಿಬಿರ | 14 |

### ಮುಖ ಪುಟ

ಮಹಿಳಾ ವಿಭಾಗದ ವತಿಯಿಂದ ಅಂತಾರಾಷ್ಟ್ರೀಯ ಯೋಗ ದಿನಾಚರಣೆ
Pre primary Parent Orientation Programme
ಯಕ್ಷಗಾನ ಮತ್ತು ರಂಗ ತರಬೇತಿ ಸಮಿತಿ – ಮಕ್ಕಳ ಯಕ್ಷಗಾನ ತರಬೇತಿ ಪ್ರಾರಂಭ
World Environment Day Celebration

# ಸಂಪಾದಕೀಯ



## Common sense without education is better than education without common sense

ದಾರ್ಶನಿಕರ ಪ್ರಕಾರ ಸಾಮಾನ್ಯ ಜ್ಞಾನವಿಲ್ಲದೆ ಶಿಕ್ಷಣಕ್ಕಿಂತ, ಶಿಕ್ಷಣವಿಲ್ಲದೇ ಸಾಮಾನ್ಯ ಜ್ಞಾನ ಹೊಂದುವುದು ಉತ್ತಮ. ಈ 'ಸಾಮಾನ್ಯ ಜ್ಞಾನ' ಎಂದರೆ ರಾಕೆಟ್ ಸೈನ್ಸ್‌ನಂತೆ ಪಾಂಡಿತ್ಯ ಹೊಂದಿದವರಿಗೆ ಮಾತ್ರ ಸೀಮಿತ ಅಂದುಕೊಳ್ಳುವುದು ತಪ್ಪು ಗ್ರಹಿಕೆ. ಈ ಸಾಮಾನ್ಯ ಜ್ಞಾನವೆಂದರೆ ಉತ್ತಮ ಪ್ರಜ್ಞೆ. ಕೌಶಲ್ಯ, ನಾವು ಪ್ರತಿಕ್ರಿಯಿಸುವ ಬಗೆ, ಸಮಯ ಪ್ರಜ್ಞೆ ಅಷ್ಟೇ. ಇಂದಿನ ಮಕ್ಕಳಿಗೆ ಕೇವಲ ಶೈಕ್ಷಣಿಕ ಪುಸ್ತಕ ನೀಡಿ (ಸ್ಪರ್ಧಾತ್ಮಕ ಜಗತ್ತಿಗೆ) ಬಾಹ್ಯ ಪ್ರಪಂಚದ ಪರಿವೆಯೇ ಇಲ್ಲದಂತೆ ಪರೀಕ್ಷೆ, ರ್‍ಯಾಂಕ್‌ಗಳ ಹಿಂದೆ ಓಟದ ಕುದುರೆಗಳಂತೆ ತಯಾರು ಮಾಡುತ್ತಿರುವುದು ವಿಪರ್ಯಾಸ. ಈ ಸಾಮಾನ್ಯ ಜ್ಞಾನ ಕೇವಲ ಶೈಕ್ಷಣಿಕ ಪುಸ್ತಕಗಳಿಂದ ದೊರೆಯುವುದಿಲ್ಲ. ಇದು ಪರಿಸ್ಥಿತಿ, ಪರಿಶ್ರಮ, ಕಲಿಕಾಸಕ್ತಿ, ಹೊಸ ವಿಷಯಗಳನ್ನು ಕಲಿಯುವ ಶ್ರದ್ಧೆ ಇವುಗಳಿಂದ ಪಡೆಯಬಹುದು.

ಎಲ್ಲಾ ಪರೀಕ್ಷೆಗಳಲ್ಲಿ ಪ್ರಥಮ ಸ್ಥಾನ ಪಡೆದು, ಎಲ್ಲರ ಶಹಬ್ಬಾಸ್ ಗಿರಿ ಪಡೆದೂ ಜೀವನದಲ್ಲಿ ವಿಫಲರಾದವರಿದ್ದಾರೆ. ಎಲ್ಲರಿಂದ ಅಪ್ರಯೋಜಕ ಎನಿಸಿಕೊಂಡು ಜೀವನದಲ್ಲಿ ಸಾಧನೆ ಮಾಡಿದವರೂ ಇದ್ದಾರೆ. ಎಲ್ಲಕ್ಕೂ ಕಾರಣ ಈ ಜೀವನ ಕೌಶಲ್ಯ. ನಿದರ್ಶನದ ಮೂಲಕ ಹೇಳುವುದಾದರೆ – ಒಮ್ಮೆ ಅಂಬಿಗ ದೋಣಿಯಲ್ಲಿ ಪ್ರಯಾಣಿಕರನ್ನು ತುಂಬಿಸಿಕೊಂಡು ಮತ್ತೊಂದು ದಡಕ್ಕೆ ಚಲಿಸುತ್ತಿದ್ದ. ಆ ಪ್ರಯಾಣಿಕರ ಗುಂಪಿನಲ್ಲಿ ಒಬ್ಬ ಪಂಡಿತೋತ್ತಮನಿರುತ್ತಾನೆ. ತನ್ನ ಪಾಂಡಿತ್ಯ, ಜ್ಞಾನದ ಬಗ್ಗೆ ಅಪಾರವಾದ ನಂಬಿಕೆ, ಅಹಂ ಇದ್ದ ಆ ಪಂಡಿತನು ಸಮಯ ಕಳೆಯುವ ಉದ್ದೇಶದಿಂದಲೋ ಅಥವಾ ತನ್ನ ಪ್ರತಿಭೆಯ ಪ್ರದರ್ಶನ ಮಾಡುವ ಉದ್ದೇಶದಿಂದಲೋ ಅಂಬಿಗನನ್ನು ಪ್ರಶ್ನೆ ಮೇಲೆ ಪ್ರಶ್ನೆ ಕೇಳಲು ಪ್ರಾರಂಭಿಸುತ್ತಾನೆ. ನಿನಗೆ ವೇದ ಗೊತ್ತಾ? ಉಪನಿಷತ್ತು ಗೊತ್ತಾ? ದೇಶದ ಬಗ್ಗೆ ಗೊತ್ತಾ? ಪುರಾಣ ಗೊತ್ತಾ? ಜನನ–ಮರಣದ ಬಗ್ಗೆ ಗೊತ್ತಾ? ಹೀಗೆ ಹಲವು ಪ್ರಶ್ನೆಗಳಿಗೆ ಅಂಬಿಗ ದಿಗಿಲಾಗುತ್ತಾನೆ. ಹೌದಲ್ಲವೇ? ನನಗೆ ಪ್ರಪಂಚ ಜ್ಞಾನವೇ ಇಲ್ಲ, ನನಗೇನು ತಿಳಿದಿಲ್ಲ ನೀವು ಅಪಾರ ಜ್ಞಾನಿಗಳು ಎಂದು ಒಪ್ಪಿಕೊಂಡ ಅಂಬಿಗನಿಗೆ ತನ್ನ ಜ್ಞಾನದ ಬಗ್ಗೆಯೇ ಕೀಳರಿಮೆ ಉಂಟಾಗುತ್ತದೆ. ಹೀಗೆಯೇ ಸಾಗುತ್ತಿರುವಾಗ ವಾತಾವರಣದ ವೈಪರೀತ್ಯದಿಂದ ಜೋರಾಗಿ ಗಾಳಿ ಮಳೆ ಪ್ರಾರಂಭವಾಗುತ್ತದೆ. ಬಿರುಗಾಳಿಗೆ ಸಿಲುಕಿ ದೋಣಿ ಅಲುಗಾಡಲು ಪ್ರಾರಂಭವಾಗುತ್ತದೆ. ಇನ್ನೇನು ಈಜಿ ದಡ ಸೇರುವುದೊಂದೇ ಮಾರ್ಗವೆಂದರಿತ ಅಂಬಿಗ ಪಂಡಿತೋತ್ತಮರಲ್ಲಿ ಕೇಳುತ್ತಾನೆ–ಪಂಡಿತರೇ ನಿಮಗೆ ಈಜು ಬರುತ್ತದಲ್ಲವೇ? ಬೇಗ ಈಜಿ ದಡ ಸೇರಿ ಎಂದು ನೀರಿಗೆ ಧುಮುಕುತ್ತಾನೆ. ಸಕಲ ಪ್ರಪಂಚ ಜ್ಞಾನ, ವೇದ ಉಪನಿಷತ್ತುಗಳನ್ನು ತಿಳಿದ ಪಂಡಿತೋತ್ತಮರಿಗೆ ಈಜು ಬರುತ್ತಿರಲಿಲ್ಲ. ನಾನು ಪಡೆದ ಯಾವ ಜ್ಞಾನವೂ ನನ್ನನ್ನು ಬದುಕಿಸಲಾರದು. ಆದರೆ ಅಜ್ಞಾನಿ ಎನ್ನುವುದು ನಮ್ಮ ಶೈಕ್ಷಣಿಕ ಅರ್ಹತೆಯಿಂದ ಬರುವುದಲ್ಲ, ನಮಗೆ ಅವಶ್ಯಕತೆ ಇದ್ದಾಗ ಬಳಸುವ ಕೌಶಲ್ಯ, ಸಾಮಾನ್ಯ ಜ್ಞಾನದಿಂದಲೂ ಜ್ಞಾನಿ ಎನಿಸಿಕೊಳ್ಳಬಹುದು ಎಂದರಿತ ಪಂಡಿತರು ಸೋಲೊಪ್ಪಿಕೊಳ್ಳುತ್ತಾರೆ.

ನಮ್ಮಲ್ಲಿ ಅನೇಕರ ಕಥೆಯೂ ಇದೇ ಆಗಿರುತ್ತದೆ. ದೊಡ್ಡ ಪದವಿ, ರ್‍ಯಾಂಕ್ ಎಲ್ಲಾ ಇದ್ದೂ ಜೀವನ ಕೌಶಲ್ಯ ತಿಳಿಯದೇ ಸೋತು ಬಿಡುತ್ತಾರೆ. ಪುಸ್ತಕ ಜ್ಞಾನವೇನೋ ಇದೆ, ಲೋಕಜ್ಞಾನವಿರುವುದಿಲ್ಲ. ಇಂದಿನ ಮಕ್ಕಳ ಶಿಕ್ಷಣ ವ್ಯವಸ್ಥೆಯೂ ಇದಕ್ಕೆ ಹೊರತಾಗಿಲ್ಲ. ಉತ್ತಮ ಶಿಕ್ಷಣದ ಜೊತೆಗೆ ಇತರ ಕೌಶಲ್ಯಗಳಿಗೆ ಪ್ರೋತ್ಸಾಹ ನೀಡಿ ಸಾಮಾನ್ಯ ಜ್ಞಾನವನ್ನು ಕಲಿಕಾಸಕ್ತಿಯನ್ನು ಮಕ್ಕಳಲ್ಲಿ ತುಂಬುವುದು ಅನಿವಾರ್ಯ. ಯಾವ ಸಂದರ್ಭವನ್ನೂ ಜಾಣ್ಮೆಯಿಂದ ನಿಭಾಯಿಸಬಲ್ಲ ಕೌಶಲ್ಯವಿರುವ ಪ್ರಜ್ಞಾವಂತ ಯುವಜನಾಂಗದ ಅವಶ್ಯಕತೆ ಸಮಾಜಕ್ಕಿದೆ.

**ಅರವಿಂದ ಶೆಟ್ಟಿ ಎಂ.**

# ಅಧ್ಯಕ್ಷರ ಮಾತು



ಕಳೆದ 2-3 ತಿಂಗಳಿಂದ ಎಲ್ಲರೂ ತಮ್ಮ ಮಕ್ಕಳ ಪರೀಕ್ಷಾ ಫಲಿತಾಂಶದ ಬಗ್ಗೆ ಮುಂದಿನ ಶೈಕ್ಷಣಿಕ ವರ್ಷದ ಬಗ್ಗೆ ಯೋಚಿಸುತ್ತಾ, ತಮ್ಮ ತಮ್ಮ ಮಕ್ಕಳನ್ನು ಬೇರೆ ಬೇರೆ ಶಾಲೆ ಕಾಲೇಜುಗಳಿಗೆ, ವೃತ್ತಿಪರ ಕೋರ್ಸ್‌ಗಳಿಗೆ ಸೇರಿಸುವ ಕೆಲಸದಲ್ಲಿ ತೊಡಗಿದ್ದು, ಈಗ ಸ್ವಲ್ಪ ನಿರಾಳರಾಗಿರಬಹುದು. ಇಂದಿನ ಸ್ಪರ್ಧಾತ್ಮಕ ದಿನಗಳಲ್ಲಿ ಇದು ಬಹಳ ಮುಖ್ಯ. ಮಕ್ಕಳ ಭವಿಷ್ಯದ ಬಗ್ಗೆ ಪೋಷಕರು ಆತಂಕ ಪಡುವುದರಲ್ಲಿ ಯೋಚಿಸುವುದರಲ್ಲಿ ಆಶ್ಚರ್ಯವೇನಿಲ್ಲ.

ಬಂಟರ ಸಂಘ ಆರ್.ಎನ್.ಎಸ್ ವಿದ್ಯಾನಿಕೇತನ 1 ಮತ್ತು 2ರಲ್ಲಿಯೂ ಹೊಸ ಶೈಕ್ಷಣಿಕ ವರ್ಷದ ಪ್ರವೇಶ ದಾಖಲಾತಿ ಕಾರ್ಯ ಬಹುತೇಕ ಪೂರ್ಣಗೊಂಡಿದ್ದು, ಪೋಷಕರಿಗಾಗಿ, ಅಧ್ಯಾಪಕರಾಗಿ ತರಬೇತಿ ಕಾರ್ಯಾಗಾರಗಳೂ ನಡೆಯುತ್ತಿವೆ. ಶಾಲಾ ಕಾಲೇಜಿನ ಆಗು ಹೋಗುಗಳು, ಶಿಕ್ಷಣ ರೀತಿ ನೀತಿಗಳನ್ನು ಪೋಷಕರಿಗೆ ಅರಿವು ಮಾಡಿಕೊಡುವುದು ಬಹಳ ಮುಖ್ಯ. ಹಾಗೆಯೇ ಪೋಷಕರ ಸಹಕಾರವೂ ನಮಗೆ ಇರಲಿ ಎಂದು ಆಶಿಸುತ್ತೇನೆ. ಒಂದು ವಿದ್ಯಾಸಂಸ್ಥೆಯನ್ನು ನಡೆಸಬೇಕಾದರೆ ಬಹಳಷ್ಟು ಸಮಸ್ಯೆಗಳು ಎದುರಾಗುವುದು ಸಹಜ. ಆದರೆ ಪೋಷಕರ ಸಲಹೆ ಸೂಚನೆಗಳನ್ನು ನಾವು ಗೌರವದಿಂದ ಸ್ವೀಕರಿಸಿ, ಉತ್ತಮ ಗುಣಮಟ್ಟದ ಶಿಕ್ಷಣ ನೀಡಲು ನಾವು ಬದ್ಧರಾಗಿರಬೇಕಾಗುತ್ತದೆ.

ಸಂಘದ ಸಭಾಂಗಣದಲ್ಲಿ ಅಗತ್ಯವಿರುವ ದುರಸ್ತಿ ಕಾರ್ಯಗಳನ್ನು ಕೈಗೆತ್ತಿಕೊಳ್ಳಲು ನಿರ್ಧರಿಸಿ, ಚರ್ಚೆ ನಡೆಸಲಾಗಿದೆ. ಯಲಚಗುಪ್ಪೆ ಶಿಕ್ಷಣ ಸಂಕೀರ್ಣದಲ್ಲಿ ಹಾಸ್ಟೆಲ್‌ನ 2ನೇ ಕಟ್ಟಡ ಹಾಗೂ ಭೋಜನ ಶಾಲೆಯ ನಿರ್ಮಾಣ ಕಾರ್ಯ ಶೀಘ್ರದಲ್ಲೇ ಪ್ರಾರಂಭವಾಗಲಿದೆ. ಇದಕ್ಕೆ ಬೇಕಾಗಿರುವ ಪ್ರಾರಂಭಿಕ ಕೆಲಸಗಳು ನಡೆಯುತ್ತಿವೆ.

ಬೆಂಗಳೂರು ಬಂಟರ ಸಂಘದ ವತಿಯಿಂದ ನೂತನವಾಗಿ ಆಯುರ್ವೇದ ಕಾಲೇಜು, ಆಸ್ಪತ್ರೆ ನಿರ್ಮಾಣಕ್ಕೋಸ್ಕರ 5 ಎಕರೆ ಜಮೀನನ್ನು ಬೆಂಗಳೂರು ನಗರದ ಆಸುಪಾಸಿನಲ್ಲಿ ಖರೀದಿಸಲು ಸ್ಥಳ ಪರಿಶೀಲನೆ ನಡೆಯುತ್ತಿದೆ. ಇದಕ್ಕಾಗಿ ಪತ್ರಿಕೆಗಳಲ್ಲಿ ಜಾಹೀರಾತನ್ನು ನೀಡಲಾಗಿದೆ. ಇದಕ್ಕೆ ಪೂರಕವಾಗಿ ಒಂದು ಹಂತದ ತಯಾರಿ ಕೆಲಸ ಪೂರ್ಣವಾದ ನಂತರ ನಾವು ಈ ವಿಷಯವನ್ನು ಮಹಾಸಭೆಯಲ್ಲಿ ಚರ್ಚಿಸಲು ನಿರ್ಧಾರ ತೆಗೆದುಕೊಳ್ಳುತ್ತೇವೆ. ಇದರ ಜೊತೆಯಲ್ಲಿ ಹಿರಿಯ ನಾಗರಿಕರಿಗಾಗಿ ಒಂದು ವಾಸದ ಮನೆಯನ್ನು ನಿರ್ಮಿಸಲು ಚರ್ಚೆ ನಡೆಯುತ್ತಿದೆ. ಇದಿಷ್ಟೂ ಕೆಲಸದ ಪ್ರಾರಂಭವಾಗಿ ಮುಂದಿನ ದಿನಗಳಲ್ಲಿ ಇವು ಕಾರ್ಯಗತವಾಗಬೇಕೆಂಬುದು ನಮ್ಮ ಈಗಿನ ಆಡಳಿತ ಮಂಡಳಿಯ ಆಸೆಯಾಗಿದೆ. ಯೋಜನಾ ಸಮಿತಿಯ ಸಂಚಾಲಕರಾದ ಶ್ರೀ ಸತೀಶ್ ಕುಮಾರ್ ಶೆಟ್ಟಿಯವರು ಮತ್ತು ಕೋ-ಆರ್ಡಿನೇಟರ್ ಶ್ರೀ ಪ್ರವೀಣ್‌ಚಂದ್ರ ಶೆಟ್ಟಿಯವರು ಈ ಕೆಲಸದಲ್ಲಿ ನಿರತರಾಗಿದ್ದಾರೆ.

ಸಂಘದ ಮಹಿಳಾ ವಿಭಾಗದಿಂದ ಯೋಗ ದಿನಾಚರಣೆಯ ಕಾರ್ಯಕ್ರಮ ನಡೆಸಲಾಗಿತ್ತು. ಮಹಿಳಾ ವಿಭಾಗದ ಚೇರ್‌ಪರ್ಸನ್ ಶ್ರೀಮತಿ ಮಾಲತಿ ಜೆ. ಶೆಟ್ಟಿ ಹಾಗೂ ಸಮಿತಿಯ ಎಲ್ಲಾ ಸದಸ್ಯೆಯರಿಗೆ ಅಭಿನಂದನೆಗಳು. ವಿದ್ಯಾರ್ಥಿವೇತನ ಹಾಗೂ ಪ್ರಶಸ್ತಿ ಸಮಿತಿಯಿಂದ ವಿದ್ಯಾರ್ಥಿ ವೇತನವನ್ನು ಅರ್ಹ ವಿದ್ಯಾರ್ಥಿಗಳಿಗೆ ನೀಡಲಾಗುತ್ತಿದೆ. ಶ್ರೀ ಸದಾನಂದ ಸುಲಾಯರವರು ಮತ್ತು ಸಮಿತಿ ಸದಸ್ಯರು ಈ ನಿಟ್ಟಿನಲ್ಲಿ ಉತ್ತಮ ಕೆಲಸ ಮಾಡುತ್ತಿದ್ದಾರೆ. ಹಾಗೆಯೇ ವಿವಾಹ ವೇದಿಕೆ ಸಮಿತಿ, ವೈದ್ಯಕೀಯ ವಿಭಾಗ, ನಿರ್ವಹಣಾ ಸಮಿತಿಯವರು ಹಾಗೂ ಇತರ ಸಮಿತಿಯವರೆಲ್ಲರೂ ಆಯಾ ಸಮಿತಿಯ ಕೆಲಸದಲ್ಲಿ ತೊಡಗಿಕೊಂಡಿರುವುದು ಶ್ಲಾಘನೀಯ.

**ಎಂ. ಮುರಲೀಧರ ಹೆಗ್ಡೆ**
ಅಧ್ಯಕ್ಷರು

hegdemm@gmail.com

# ಗೌರವ ಕಾರ್ಯದರ್ಶಿಗಳ ವರದಿ



ದಿನಾಂಕ 30.07.2023 ರಿಂದ 06.08.2023 ರವರೆಗೆ ಪ್ರತಿದಿನ ಸಂಜೆ 6.30 ರಿಂದ 8.30 ರವರೆಗೆ ಸಂಘದ ಸಭಾಭವನದಲ್ಲಿ ಚಿನ್ಮಯ ಮಿಷನ್ ಸಹಯೋಗದೊಂದಿಗೆ ಸ್ವಾಮಿ ಬ್ರಹ್ಮಾನಂದ ಇವರಿಂದ ಗೀತಾ ಜ್ಞಾನಯಜ್ಞ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ತಾವೆಲ್ಲರೂ ಹೆಚ್ಚಿನ ಸಂಖ್ಯೆಯಲ್ಲಿ ಈ ಆಧ್ಯಾತ್ಮಿಕ ಕಾರ್ಯಕ್ರಮದಲ್ಲಿ ಭಾಗವಹಿಸಬೇಕಾಗಿ ವಿನಂತಿ.

ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನದ ನರ್ಸರಿ ವಿದ್ಯಾರ್ಥಿಗಳ 'Orientation' ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಶಿಕ್ಷಣ ತಜ್ಞೆ ಹಾಗೂ ಸಲಹೆಗಾರರಾದ ಶ್ರೀಮತಿ ರೇಣು ಶ್ರೀನಿವಾಸನ್‌ರವರು ಮಕ್ಕಳನ್ನು ಉನ್ನತ ಮಾರ್ಗದಲ್ಲಿ ಕೊಂಡೊಯ್ಯುವಲ್ಲಿ ಪೋಷಕರ ಪಾತ್ರವನ್ನು ಹಾಗೂ ಪ್ರಸ್ತುತ ಸನ್ನಿವೇಶವನ್ನು ಹೇಗೆ ನಿಭಾಯಿಸಬೇಕು ಎನ್ನುವುದನ್ನು ಪೋಷಕರಿಗೆ ಮನದಟ್ಟು ಮಾಡಿದರು. ಇದೇ ಸಂದರ್ಭದಲ್ಲಿ ಪೋಷಕರ ಪ್ರಶ್ನೆಗಳಿಗೆ ಮುಖ್ಯ ಅತಿಥಿಗಳು ಸೂಕ್ತವಾಗಿ ಉತ್ತರಿಸಿದರು. ಬಂಟರ ಸಂಘದ ಆರ್.ಎನ್.ಎಸ್. ವಿದ್ಯಾನಿಕೇತನದಲ್ಲಿ ವಿದ್ಯಾರ್ಥಿಗಳು ವಿವಿಧ ಯೋಗಭಂಗಿಗಳನ್ನು ಪ್ರದರ್ಶಿಸುವ ಮೂಲಕ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯನ್ನು ಆಚರಿಸಲಾಯಿತು.

ಸಂಘದ ಮಹಿಳಾ ವಿಭಾಗದ ವತಿಯಿಂದ ಹಮ್ಮಿಕೊಂಡ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ಪ್ರಯುಕ್ತ ನಡೆದ ಯೋಗ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾದ ಯೋಗ ಶಿಕ್ಷಕಿ ಶ್ರೀಮತಿ ಸರೋಜ ಶೆಟ್ಟಿಯವರು ಯೋಗದ ಮಹತ್ವವನ್ನು ತಿಳಿಸಿ, ದಿನನಿತ್ಯದಲ್ಲಿ ಅಳವಡಿಸಿಕೊಳ್ಳಬೇಕಾದ ಧ್ಯಾನ ಹಾಗೂ ಸರಳ ಯೋಗಾಸನಗಳನ್ನು ಕಲಿಸಿಕೊಟ್ಟರು. ಉಪಯುಕ್ತ ಕಾರ್ಯಕ್ರಮಗಳನ್ನು ಆಯೋಜಿಸಿದ ಮಹಿಳಾ ವಿಭಾಗದ ಚೇರ್‌ಪರ್ಸನ್ ಶ್ರೀಮತಿ ಮಾಲತಿ ಜೆ. ಶೆಟ್ಟಿ ಹಾಗೂ ತಂಡಕ್ಕೆ ಅಭಿನಂದನೆಗಳು.

ಪೊಲೀಸ್ ಇಲಾಖೆಯ ಸಹಯೋಗದೊಂದಿಗೆ ಬಂಟರ ಸಂಘದ ಆರ್.ಎನ್.ಎಸ್. ವಿದ್ಯಾನಿಕೇತನದ ಪ್ರೌಢಶಾಲೆ ಹಾಗೂ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿಗಳಿಗೆ ಮಾದಕ ವಸ್ತು ಸೇವನೆಯಿಂದಾಗುವ ದುಷ್ಪರಿಣಾಮಗಳ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮವನ್ನು ಸಂಘದ ಸಭಾಭವನದಲ್ಲಿ ಆಯೋಜಿಸಲಾಗಿತ್ತು. ಪ್ರತಿದಿನ ಬೆಳಗ್ಗೆ ಶಾಲೆ ಆರಂಭವಾಗುವ ಹಾಗೂ ಸಂಜೆ ಬಿಡುವ ಸಮಯದಲ್ಲಿ ವಿಪರೀತ ಟ್ರಾಫಿಕ್ ಸಮಸ್ಯೆಯಾಗುತ್ತಿದ್ದು, ಬೆಂಗಳೂರು ಪಶ್ಚಿಮ ವಿಭಾಗದ ಟ್ರಾಫಿಕ್ ಇನ್ಸ್ಪೆಕ್ಟರ್‌ರವರು ಸೂಕ್ತ ಸಿಬ್ಬಂದಿ ನಿಯೋಜಿಸಿ ಈ ಸಮಸ್ಯೆ ನಿವಾರಿಸುವಲ್ಲಿ ಸಹಕರಿಸಿರುತ್ತಾರೆ. ಇವರಿಗೆ ಸಂಘದ ಪರವಾಗಿ ಹೃತ್ಪೂರ್ವಕ ವಂದನೆಗಳು.

ಪ್ರಸ್ತುತ ಸಾಲಿನಲ್ಲಿ ಯಕ್ಷಗಾನ ತರಗತಿಗಳು ಪ್ರಾರಂಭವಾಗಿದ್ದು, ಯಕ್ಷಗಾನ ಹಾಗೂ ರಂಗ ತರಬೇತಿ ಸಮಿತಿಯ ಚೇರ್‌ಪರ್ಸನ್ ಶ್ರೀ ರಮೇಶ್ ಬಿ. ಶೆಟ್ಟಿ, ಸಂಚಾಲಕರಾದ ಶ್ರೀ ಹರಿಪ್ರಸಾದ್ ಶೆಟ್ಟಿ ಹಾಗೂ ತಂಡದ ಉಸ್ತುವಾರಿಯಲ್ಲಿ ಹಿರಿಯ ಯಕ್ಷಗಾನ ಕಲಾವಿದರಾದ ಶ್ರೀ ಶಿವಕುಮಾರ್ ಬೇಗಾರ್‌ರವರು ಮಹಿಳೆಯರಿಗೆ ಹಾಗೂ ಶ್ರೀ ಸುಬ್ರಾಯ ಹೆಬ್ಬಾರ್‌ರವರು ಮಕ್ಕಳಿಗೆ ಯಕ್ಷಗಾನ ತರಬೇತಿ ನೀಡುತ್ತಿದ್ದಾರೆ. ಆಸಕ್ತ ಕಲಾಭಿಮಾನಿಗಳು ಸಂಘದ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ.

ಇಂತಿ ತಮ್ಮ ಪ್ರೀತಿಯ,

**ಬಿ. ಆನಂದರಾಮ ಶೆಟ್ಟಿ**

**ಗೌರವ ಕಾರ್ಯದರ್ಶಿ**

# ಬಂಟರ ಅಸ್ಮಿತೆಯನ್ನು ಬೆಂಗಳೂರಲ್ಲೂ ಉಳಿಸಿ ಯಶಸ್ಸು ಕಂಡ ಇರ್ಮಾಡಿ ಜಯಪ್ರಸಾದ ಶೆಟ್ಟಿ.

ಬಂಟರನ್ನು ನಾಡವರೆಂದೂ ಬಾರಗರೆಂದೂ ಕರೆಯುವ ಬಗ್ಗೆ ವಿವರವಾಗಿ ಈ ಕೃತಿಯ ಹಿಂದೆ ಓದಿರುವಿರಿ. ಈ ಎಲ್ಲಾ ಹೆಸರುಗಳನ್ನು 'ಒಕ್ಕೆಲ್ಮೆ' ಎಂಬ ಒಂದೇ ಹೆಸರಿನಿಂದ ಕರೆಯುವ ರೂಢಿ ಇದೆ. ಈ ಜನಾಂಗವನ್ನು ಪಾಡ್ದನಗಳು 'ಒಕ್ಕೆತೆರಿ' ಜಾತಿ ಎನ್ನುತ್ತವೆ. ಒಕ್ಕುವ ಅಂದರೆ ಮಣ್ಣು ಒಕ್ಕುವ ಅರ್ಥಾತ್ ಕ್ಷೇತ್ರಕಕ್ಷಣ ಮಾಡುವ ಜನಾಂಗ ಇವರದ್ದು. ಯೋಧ ಮೂಲದ ಬಂಟರು ಎಂಬ ಹೇಳಿಕೆ ಇದೆಯಾದರೂ ಒಟ್ಟಾರೆಯಾಗಿ ಬಂಟರು ಗುರುತಿಸಿಗೊಂಡಿದ್ದು ಒಕ್ಕುವ ಅಂದರೆ ಬೇಸಾಯದ ಕಾಯಕದ ಮೂಲಕ. ಭತ್ತದ ಬೇಸಾಯವೇ ಈ ಭಾಗದ ಪ್ರಮುಖ ಬೆಳೆ ಆಗಿದ್ದ ದಿನಗಳಲ್ಲಿ ಭತ್ತದ ಅಕ್ಕಿಮುಡಿಯನ್ನು ವಿದೇಶಗಳಿಗೂ ರಫ್ತು ಮಾಡಲಾಗುತ್ತಿತ್ತು.



ಜಯಪ್ರಸಾದ ಶೆಟ್ಟಿ ಇರ್ಮಾಡಿ


ಭತ್ತದ ಬೇಸಾಯ ಬಂಟರ ಅಸ್ಮಿತೆಯಾಗಿತ್ತು. ಭೂ ಮಸೂದೆ ಜಾರಿಗೆ ಬರುವವರೆಗೂ ಬಂಟರೆಂದರೆ ಬೇಸಾಯಗಾರರೆಂದೇ ಗುರುತಿಸಿದ್ದರು. ಈ ಬೇಸಾಯ ಲೇವಾದೇವಿಯನ್ನೂ ಒಳಗೊಂಡಿತ್ತು. ಬಸ್ರೂರು ಭಾಗದಲ್ಲಿ ವ್ಯಾಪಾರವೂ ಇತ್ತಾದರೂ ಉಳಿದಂತೆ ಬೇಸಾಯವೇ ಪ್ರಮುಖ ಕಸುಬಾಗಿತ್ತು. ಆದರೆ 1975ರ ಸುಮಾರಲ್ಲಿ ಕರ್ನಾಟಕದಲ್ಲಿ ಜಾರಿಯಾದ ಭೂ ಮಸೂದೆ ಬಂಟರ ಬೇಸಾಯದ ಅಸ್ಮಿತೆಯನ್ನೇ ಕಿತ್ತು ಬಿಸಾಡಿತು ಎಂದರೂ ತಪ್ಪಾಗಲಾರದು. ಈ ಸಂದರ್ಭದಲ್ಲಿ ಅನ್ನದ ಸಂಪಾದನೆಯನ್ನು ಹುಡುಕುತ್ತಾ ಬಂಟರು ತುಳುನಾಡಿನಿಂದ ಬೇರೆ ಬೇರೆ ಕಡೆ ಹೋದರು. ಅದೆಷ್ಟೋ ಮಂದಿ ಮುಂಬಯಿ ಸೇರಿದರು. ಕೆಲವರು ಬೆಂಗಳೂರು ಸೇರಿದರು. ಮುಂಬಯಿಗೆ ಹೋದವರಲ್ಲಿ ಅನೇಕರು ಹೊಟೇಲಲ್ಲಿ ದುಡಿದು ಮುಂದೆ ಉದ್ಯಮಿಗಳಾದರು. ಬೆಂಗಳೂರಿಗೆ ಬಂದವರು ಬೇರೆ ಬೇರೆ ವೃತ್ತಿಯಲ್ಲಿ ತೊಡಗಿ ತಮ್ಮ ಭವಿಷ್ಯವನ್ನು ರೂಪಿಸಿದರು.

ಊರು ತೊರೆದು ಅನ್ನ ಅರಸಿ ಬಂದರೂ ತಾನು ನೆಲೆ ನಿಂತಲ್ಲಿ ತಮ್ಮ ಅಸ್ಮಿತೆಯಾದ ಬೇಸಾಯವನ್ನು/ ಕೃಷಿಯನ್ನು ಅಪ್ಪಿಒಪ್ಪಿ ಭವಿಷ್ಯವನ್ನು ಹಸನಾಗಿಸಿದವರು ಇರ್ಮಾಡಿ ಪ್ರಸಾದ್ ಶೆಟ್ಟಿಯವರು. ಇರ್ಮಾಡಿ ಇವರ ಹುಟ್ಟೂರು. ತವರು ನೆಲ. ಹೀಗಾಗಿ ತಮ್ಮ ಹೆಸರಿನಲ್ಲೂ ಇರ್ಮಾಡಿಯನ್ನು ಉಳಿಸಿಕೊಂಡ ಪ್ರಸಾದ ಶೆಟ್ಟರು ಬಂಟರ ಅಸ್ಮಿತೆಯಾಗಿದ್ದ ಬೇಸಾಯದ ಕಾಯಕವನ್ನು ಬೆಂಗಳೂರಿಗೂ ವಿಸ್ತರಿಸಿದರು.

1960ರಲ್ಲಿ ಪ್ರಸಾದ ಶೆಟ್ಟಿಯವರು ಬೆಂಗಳೂರಿಗೆ ಕಾಲಿಟ್ಟರು. ಆಗ ಅವರ ವಯಸ್ಸು 21. ತರುಣ! ಬೆಂಗಳೂರು ಸೇರಿದ ಆರಂಭದಿಂದಲೇ ಬೇಸಾಯವನ್ನೇ ನೆಚ್ಚಿದರು. ಇವರು ಬೆಂಗಳೂರಿಗೆ ಬಂದಾಗ ಇವರ ಬಾವ (ಸಹೋದರಿಯ ಗಂಡ) ಕೆಂಗೇರಿಯಲ್ಲಿ 55 ಎಕ್ರೆ ತೋಟವನ್ನು ಹೊಂದಿದ್ದರು. ಈತ ಅವರಿಂದ ಈ ತೋಟವನ್ನು ಗೇಣಿಗೆ ಪಡೆದರು. ಈ ತೋಟದಲ್ಲಿ 60 ಹಸುಗಳ ಡೈರಿ ಫಾರ್ಮ್ ಕೂಡಾ ಇತ್ತು.

ಸುಮಾರು 10 ವರ್ಷ ಅದೇ ಭೂಮಿಯಲ್ಲಿ ಬೇಸಾಯದ ಜೊತೆ ತರಕಾರಿ ಮತ್ತಿತರ ಅನೇಕ ಬೆಳೆ ಬೆಳೆಯತೊಡಗಿದರು.

ಮೈಸೂರು ರಸ್ತೆ ಬಳಿಯ ವೃಷಭಾವತಿ ನಾಲೆಯ ನೀರಿನಾಶ್ರಯದಲ್ಲಿ ಕೆಲವರು ಹಸುಗಳಿಗೆ ಬೇಕಾದ ಹುಲ್ಲನ್ನೂ ಬೆಳೆಯತೊಡಗಿದರು. ಆ ದಿನಗಳಲ್ಲಿ ಬೆಂಗಳೂರು ನಗರದಲ್ಲಿ ಇರುವ ಹಸು ಪಾಲಕರಿಗೆ, ಡೈರಿ ಮಾಲಿಕರಿಗೆ ಎತ್ತಿನಗಾಡಿಯಲ್ಲಿ ಇಲ್ಲಿಂದಲೇ ಹುಲ್ಲು ಸರಬರಾಜು ಆಗುತ್ತಿತ್ತು. ಇದೇ ದಿನಗಳಲ್ಲಿ ಪಿ.ಡಬ್ಲು. ಇಲಾಖೆಯವರು ಮೈಲಾಸಂದ್ರ ಗ್ರಾಮಕ್ಕೂ ನಾಲೆಯ ನೀರು ಬಿಡತೊಡಗಿದರು.



ನೀರಿನ ಲಭ್ಯತೆಯನ್ನು ಮನಗಂಡು ಶೆಟ್ಟರೂ ಹುಲ್ಲು ಬೆಳೆಸತೊಡಗಿದರು. ಈತನೇ ಒಂದು ಎತ್ತಿನಗಾಡಿ ಸಂಪಾದಿಸಿ ಕಬ್ಬನ್ ಪೇಟೆ, ಶೇಷಾದ್ರಿಪುರಂ, ಮಲ್ಲೇಶ್ವರ, ಚಾಮರಾಜಪೇಟೆ–ಹೀಗೆ ಈ ಭಾಗಗಳಲ್ಲಿ ಇದ್ದ ಅನೇಕ ಡೈರಿಗಳಿಗೆ ಹುಲ್ಲು ಸರಬರಾಜು ಮಾಡತೊಡಗಿದರು. ಇದರಿಂದ ಒಳ್ಳೆಯ ಆದಾಯ ಲಭಿಸಿತು. ಹೀಗಾಗಿ ಎರಡೇ ವರ್ಷದಲ್ಲಿ ಎತ್ತಿನಗಾಡಿಯ ಜಾಗದಲ್ಲಿ ಮಿನಿ ಲಾರಿ ಖರೀದಿಸಿ ಆ ಮೂಲಕ ಹುಲ್ಲು ಸರಬರಾಜು ಮಾಡಲಾಯಿತು. ಎಮ್.ಐ ಜಿ. ಸೆಂಟರ್. ಹೆಬ್ಬಾಳದ ಮಿಲಿಟರಿ ಫಾರ್ಮ್. ದೇವೆಗೌಡ್ರ ಫಾರ್ಮ್. ರಾಚಯ್ಯನವರ ಫಾರ್ಮ್, ಬಸವಲಿಂಗಪ್ಪನವರ ಫಾರ್ಮ್, ಕೆ.ಎಚ್ ಪಾಟೀಲ್‌ರ ಫಾರ್ಮ್, ವೈಜಯಂತಿಮಾಲರ ಫಾರ್ಮ್, ಧರ್ಮೆಂದ್ರ ಫಾರ್ಮ್, ಅಶೋಕ್‌ಕುಮಾರ್ ಫಾರ್ಮ್ – ಹೀಗೆ ಅನೇಕ ಕಡೆ ಇವರ ಹೊಲದ ಹುಲ್ಲು ಸರಬರಾಜು ಆಗತೊಡಗಿತು.

ಈ ಹುಲ್ಲು ಬೆಳೆಯಲು ಬೇರೆ 50 ಎಕ್ರೆ ಭೂಮಿಯನ್ನು ಮತ್ತೆ ಗೇಣಿಗೆ ಪಡೆದು ಹುಲ್ಲು ಬೆಳೆದು ಹುಲ್ಲು ಸರಬರಾಜು ಕಾರ್ಯಕವನ್ನು ವಿಸ್ತಾರಗೊಳಿಸಿದರು. ಈ ಹುಲ್ಲು ಬೆಳೆಯುವುದರಿಂದ ಒಳ್ಳೆಯ ಆದಾಯ ಲಭಿಸಿತು.

ಡೈರಿಗೆ ಹಾಲೂ ಸರಬರಾಜು ಆಗುತ್ತಿತ್ತು. ವುಡ್‌ಲ್ಯಾಂಡ್ಸ್ ಹೊಟೇಲ್, ವೆಸ್ಟೆಂಡ್ ಹೊಟೇಲ್, ಕೆ.ಸಿ.ದಾಸ್, ಏರ್‌ಲೈನ್ಸ್ ಮುಂತಾದ ಪ್ರತಿಷ್ಠಿತ ಹೊಟೇಲುಗಳಿಗೆ ಹಾಲು ಸರಬರಾಜು ಮಾಡಲಾಗುತ್ತಿತ್ತು. 1975ರ ಸುಮಾರಿಗೆ ಬೆಂಗಳೂರು ಡೈರಿ ಫಾರ್ಮ್ ಆರಂಭವಾಯಿತು. ಅನಂತರ ಹಾಲಿನ ಬೇಡಿಕೆ ಕುಸಿಯಿತು. 2000ದ ಸುಮಾರಿಗೆ ಹುಲ್ಲು ಬೆಳೆಯುವುದನ್ನೂ ನಿಲ್ಲಿಸಬೇಕಾಯಿತು. ಆ ಕಾಲಕ್ಕಾಗಲೇ ಭೂಮಿಯ ಬೆಲೆಯೂ ಹೆಚ್ಚಾಯಿತು. ಈ ನಡುವೆ ಶೆಟ್ಟರು. ರಾಮಸಂದ್ರಗ್ರಾಮದಲ್ಲಿ 35 ಎಕ್ರೆತೋಟ ಬೆಳೆಸಿದ್ದರು. ಮೈಲಾಸಂದ್ರದಲ್ಲಿ ಇದ್ದ 25 ಎಕ್ರೆತೋಟ, ಹೇಗೆ ಒಟ್ಟು 60 ಎಕ್ರೆ ಜಮೀನು ಇವರದ್ದೇ ಆಗಿತ್ತು. ಈ ನಡುವೆ 1986ರಲ್ಲಿ ಚಂದ್ರಾಲೇಔಟ್ ಬಳಿ ಮನೆ ಕಟ್ಟಿದರು. 1990ರಿಂದ ಈ ಮನೆಯಲ್ಲಿ ವಾಸಿಸತೊಡಗಿದರು. 1990ರಲ್ಲಿ ಇವರು ಬಾವನಿಂದ ಮೊದಲು ಗೇಣಿಗೆ ಪಡೆದಿದ್ದ 55 ಎಕ್ರೆ ಭೂಮಿಯನ್ನು ಇವರ ಬಾವ ಮಾರಿದರು.

2009ರಲ್ಲಿ ಇವರ 35 ಎಕ್ರೆ ಜಮೀನಿಗೆ ಪ್ರಗತಿ ಗ್ರೂಪ್ಸ್ 50:50: ಪಾಲುದಾರಿಕೆಯಲ್ಲಿ ಬಡಾವಣೆ ಮಾಡಲು ಮುಂದೆ ಬರುತ್ತಾರೆ. ಅದಕ್ಕೆ ಶೆಟ್ಟರು ಒಪ್ಪುತ್ತಾರೆ. ಮುಂದೆ ಇನ್ನೂ ಸ್ವಲ್ಪ ಜಮೀನು ಮಾರಿ ದೊಡ್ಡ ಆಲದ ಮರದ ಬಳಿ ಆರು ಎಕ್ರೆ ತೋಟ ಖರೀದಿಸುತ್ತಾರೆ. ಇವಿಷ್ಟು ರೈತನಾಗಿ ಇವರ ಸಾಧನೆಯಾಯಿತು.

ಇವರ ತೋಟದಲ್ಲಿ ಸುಮಾರು 60 ಕುಟುಂಬ ದುಡಿಯುತ್ತಿತ್ತು, ಇವರೆಲ್ಲರಿಗೂ ಮೈಲಾಸಂದ್ರಗ್ರಾಮದಲ್ಲಿ ತಲಾ ಮೂವತ್ತು ನಲ್ವತ್ತು ಭೂಮಿಯನ್ನು ದಾನವಾಗಿ ನೀಡಿ ಅವರ ಬದುಕಿಗೆ ಸೂರು ಒದಗಿಸುವಲ್ಲಿ ನೆರವಾಗುತ್ತಾರೆ. 5 ಮಂದಿ ಕಛೇರಿ ನೌಕರರಿಗೆ ತಲಾ ಎರಡು ಮಲಗುವ ಕೋಣೆಗಳ ಪ್ಲಾಟ್ ಖರೀದಿಸಿ ನೀಡುತ್ತಾರೆ. ಈ ಮೂಲಕ ತನ್ನೊಂದಿಗೆ ದುಡಿದ ಎಲ್ಲಾ ಸದಸ್ಯರನ್ನು ಕುಟುಂಬ ಎಂಬ ಕಕ್ಕುಲತೆಯಲ್ಲಿಯೇ ಕಂಡು ಅವರ ಭವಿಷ್ಯ ಬೆಳಗುವಲ್ಲಿ ನೆರವಾಗುತ್ತಾರೆ. ಇದೇ ಜಾಗದಲ್ಲಿ ಅವರಿಗಾಗಿಯೇ ಒಂದು ದೇವಿ ಮಂದಿರವನ್ನು ಕಟ್ಟಿಸಿ ಒಪ್ಪಿಸುತ್ತಾರೆ.

ಬಿ.ಡಿ.ಎ.ಇವರ 2 ಎಕ್ರೆ ಭೂಮಿಯನ್ನು ಸ್ವಾಧೀನ ಪಡಿಸಿದುದರಿಂದ ಆದ ನಷ್ಟದ ಬಗ್ಗೆ ಶೆಟ್ಟರಿಗೆ ಖೇದ ಇದೆ. ಆದರೂ ಈಗಲೂ ಇರುವ 10 ಎಕ್ರೆ ಭೂಮಿಯಲ್ಲಿ ಕೃಷಿಯನ್ನು ಮುಂದುವರಿಸುತ್ತಿದ್ದಾರೆ. ತುಳುನಾಡಿನಲ್ಲಿ ಬಂಟರ ಅಸ್ಮಿತೆಯಾಗಿದ್ದ ಕೃಷಿ ಇಲ್ಲೂ ಇರ್ಮಾಡಿ ಪ್ರಸಾದ ಶೆಟ್ಟರ ಅಸ್ಮಿತೆಯಾಗಿ ಉಳಿದಿದೆ ಎನ್ನುವುದು ಸಂತೋಷ. ಈಗಿನ ಭೂಮಿಯಲ್ಲಿ ತೆಂಗು, ಕಂಗು, ಬಾರೆ(ಳೆ), ತಾರೆ(ಳೆ) ಕುಕ್ಕು(ಮಾವು) ಪೆಲ(ಹಲಸು) ಮಾತ್ರವಲ್ಲ ಸಾಗುವಾನಿ ಮರವನ್ನೂ ಬೆಳೆಸಿದ್ದಾರೆ.

ಬೆಂಗಳೂರಲ್ಲಿ ಯಶಸ್ವೀ ಕೃಷಿಕರಾಗಿ ಗುರುತಿಸಿಕೊಂಡ ಪ್ರಸಾದ ಶೆಟ್ಟರ ಬಳಿ ಕೃಷಿಯಲ್ಲಿ ಕರಾವಳಿಯ ಮಣ್ಣಿಗೂ ಇಲ್ಲಿಯ ಮಣ್ಣಿಗೂ ನೀವು ಕಂಡ ವ್ಯತ್ಯಾಸವೇನು ಎಂದು ಕೇಳಿದಾಗ ಕರಾವಳಿ ನೀರು ಮಣ್ಣಿನಲ್ಲಿ ನಿಲ್ಲದೆ (ಮುರಕಲ್ಲು) ಬಸಿದು ಹೋಗುತ್ತದೆ. ಭೂಮಿಯ ಮೇಲೆ ನಿಲ್ಲುವುದು ಕಡಿಮೆ. ಆದರೆ ಇಲ್ಲಿಯ ನೆಲ ನೀರನ್ನು ತುಂಬಿಟ್ಟುಕೊಳ್ಳುತ್ತದೆ. ಹೀಗಾಗಿ ತೋಟಗಾರಿಕೆಗೆ ಇದು ಹೇಳಿ ಮಾಡಿಸಿದ ನೆಲ ಎಂದುತ್ತರಿಸುತ್ತಾರೆ.

ನನ್ನ ಪತಿ ಯಸ್. ಆರ್. ಹೆಗ್ಗಡೆಯವರು ಬೆಂಗಳೂರು ಬಂಟರ ಸಂಘದಲ್ಲಿ ಕಾರ್ಯಕರ್ತರಾಗಿ, ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸಿದವರು. ಪ್ರಸಾದ ಶೆಟ್ಟರ ಕೊಡುಗೈ ದಾನವನ್ನು ಬಹುವಾಗಿ ಮೆಚ್ಚಿದವರು. ಹೆಗ್ಡೆಯವರ ಸಂಗಾತಿಯಾಗಿ ನಾನೂ ಪ್ರಸಾದ ಶೆಟ್ಟರನ್ನು ಹತ್ತಿರದಿಂದ

ಬಲ್ಲವಳಾಗಿ ಆತ ನನಗೆ ಪ್ರಸಾದಣ್ಣ ಆಗಿದ್ದರು. ಸಾಮಾನ್ಯವಾಗಿ ಜಾತಿ ಜನಗಳಿಗೆ ಜನರು ನೆರವಾಗುವುದು ಎಲ್ಲೆಡೆ ಕಾಣಬರುತ್ತದೆ. ಅಂತವರಲ್ಲಿ ಇರ್ಮಾಡಿ ಪ್ರಸಾದ ಶೆಟ್ಟಿಯವರೂ ಒಬ್ಬರು ಎಂದು ನಾನು ಭಾವಿಸಿದ್ದೆ. ಆದರೆ ಈತ ಹಾಗಲ್ಲ ಎಂದು ತಿಳಿದುದು ಬಹಳ ತಡವಾಗಿ.

ತುಳುವಿನಲ್ಲಿ ಒಂದು ರೂಢಿಮಾತು ಇದೆ.

"ಮನುಷ್ಯಡಪ್ಪಇತ್ತ್‌ತೂವೊಡು. ನೀರ್‌ಗ್‌ಜತ್ತ್‌ತೂವೊಡು" (ಮನುಷ್ಯನ ಜೊತೆ ಇದ್ದು (ಬಾಳಿ) ನೋಡಬೇಕು, ನೀರಿಗೆ ಇಳಿದು ನೋಡಬೇಕು) ಎಂದು. ಬಂಟರ ಸಂಘದಲ್ಲಿ ಕೊಡುಗೈ ದಾನಿ ಆಗಿದ್ದ ಇವರು ಅಬ್ಬರದಿ ಬೊಬ್ಬಿರಿಯುವ ಜಾಯಮಾನದವರಲ್ಲ. ಸದಾ ಮೌನಿ. ಈ ವಿಷಯದಲ್ಲಿ ತಮ್ಮ ಜಾತಿ ಜನರಿಗಿಂತ ಭಿನ್ನ ವ್ಯಕ್ತಿತ್ವ ಇವರದು. ತಮ್ಮ ಕೆಲಸ ಆಯಿತು ತಾವಾಯಿತು.. ಬಂಟರ ಸಂಘದಲ್ಲಿ ಕಾರ್ಯಕಾರಿ ಸಮಿತಿ ಇಂತಹ ಕೆಲಸ ನಿಮ್ಮಿಂದ ಆಗಬೇಕು ಪ್ರಸಾದಣ್ಣ ಎಂದರೆ ಇವರೂ ಸೈ. ಅದೆಷ್ಟೋ ವಿವಾಹ ಸಮಾರಂಭಗಳಿಗೆ ತೋರಣ ಮುಹೂರ್ತಕ್ಕೆ ತಳಿರು ತೋರಣವನ್ನು ಒದಗಿಸಿಕೊಟ್ಟವರು ಪ್ರಸಾದ ಶೆಟ್ಟಿಯವರು.

1964ರಲ್ಲಿ ಬಾಕ್ರಬೈಲಿನ ಸುಜಯಾ ಅವರನ್ನು ವಿವಾಹ ಆದ ಇವರಿಗೆ ಇಬ್ಬರು ಮಕ್ಕಳು. ಮಗ ಡಾ. ಸಂದೀಪ್ ಶೆಟ್ಟಿ. (ಎಮ್.ಬಿ.ಬಿ.ಎಸ್. ಒಪ್ತೊಲ್ಮೊಲಜಿಸ್ಟ್) ಪ್ರೊಫೆಸರ್, ಕೆಂಪೇಗೌಡ ಮೆಡಿಕಲ್ ಕಾಲೇಜ್.

ಸೊಸೆ (ಎಮ್.ಬಿ.ಬಿ.ಎಸ್. ಒಪ್ತೊಲ್ಮೊಲಜಿಸ್ಟ್). ಇಬ್ಬರೂ ಸೇರಿ ಸಂಜೆ ಸ್ಥಳೀಯ ರೋಗಿಗಳನ್ನು ನೋಡುವ ಸೇವೆಯನ್ನು ಮನೆಯ ಬಳಿ ಇರುವ ಕ್ಲಿನಿಕ್‌ನಲ್ಲಿ ಮುಂದುವರಿಸುತ್ತಿದ್ದಾರೆ. ಮಗಳು ಶರ್ಮಿಳಾ ಕತಾರ್ ಶಾಲೆಯಲ್ಲಿ ಶಿಕ್ಷಕಿಯಾಗಿ ದುಡಿದು ಈಗ ಭಾರತಕ್ಕೆ ಮರಳಿದ್ದಾರೆ. ಇಂಜಿನಿಯರ್ ಅಳಿಯ ಕತಾರ್ ಸರಕಾರದ ಪೆಟ್ರೋಲ್ ಕಂಪೆನಿಯಲ್ಲಿ ಸೀನಿಯರ್ ಇಂಜಿನಿಯರ್ ಆಗಿ ದುಡಿದು ಭಾರತಕ್ಕೆ ಮರಳಿ ಬಂದಿದ್ದಾರೆ.

ಕೃಪೆ: ಬಂಟರು ಒಂದು ಸಮಾಜೋ ಸಾಂಸ್ಕೃತಿಕ ಅಧ್ಯಯನ 2022 – ಡಾ. ಇಂದಿರಾ ಹೆಗ್ಗಡೆ

# ಬಂಟರ ಸಂಘ ಬೆಂಗಳೂರು

## ಬಂಟ್ಸ್ ಸೇವಾದಳ

ಹುಟ್ಟು ಹಾಗೂ ಸಾವು ಮನುಷ್ಯ ಜೀವನದ ಸಹಜ ಪ್ರಕ್ರಿಯೆಗಳಾಗಿದ್ದು, ಬೆಂಗಳೂರು ಹಾಗೂ ಸುತ್ತಮುತ್ತ ನೆಲೆಸಿರುವ ಸಮಾಜ ಬಾಂಧವರ ನಿಧನದ ಸಂದರ್ಭದಲ್ಲಿ ಬಂಟ್ಸ್ ಸೇವಾದಳ ಸಮಿತಿಯ ವತಿಯಿಂದ ಮೃತರ ಅಂತ್ಯಕ್ರಿಯೆ ವಿಧಿ–ವಿಧಾನ ನೆರವೇರಿಸಲು ಅಗತ್ಯ ಸಹಕಾರ / ಮಾಹಿತಿ ನೀಡಲು ಹಾಗೂ ಅಂತ್ಯಕ್ರಿಯೆಗೆ ಬೇಕಾಗುವ ಸಾಮಾಗ್ರಿ ಮತ್ತು ಇನ್ನಿತರ ಮಾಹಿತಿಯನ್ನು ಒದಗಿಸಲು ನಿರ್ಧರಿಸಲಾಗಿದೆ. ಸದಸ್ಯ ಬಾಂಧವರು ತುರ್ತು ಸಂದರ್ಭದಲ್ಲಿ ಈ ಕೆಳಗಿನ ಮೊಬೈಲ್ ಸಂಖ್ಯೆಗಳನ್ನು ಸಂಪರ್ಕಿಸಬಹುದಾಗಿದೆ.

**ಮೊ : 97412 20559 / 70221 19739.**

**ಆನಂದರಾಮ ಶೆಟ್ಟಿ ಬಿ.**
ಗೌರವ ಕಾರ್ಯದರ್ಶಿ

**ಎಂ. ಮುರಲೀಧರ ಹೆಗ್ಡೆ**
ಅಧ್ಯಕ್ಷರು

**ಸತೀಶ್ ಶೆಟ್ಟಿ. ವಾಲ್ತೂರು**
ಸಂಚಾಲಕರು, ಬಂಟ್ಸ್ ಸೇವಾದಳ

**ಉಮೇಶ್ ಕುಮಾರ್ ಶೆಟ್ಟಿ**
ಚೇರ್‌ಪರ್ಸನ್, ಬಂಟ್ಸ್ ಸೇವಾದಳ

# SHE / HER:-

Holds the universe with tender hands
Creates Life in her womb
Intoxicates with her beauty and gait
Provides care, nurture and nourishment
Fiercely protects the family when endangered
Braves the seasons to keep bonds united.
Discharges businesses with adept wisdom and shrewdness
Her strength and prowess is depicted in various religious faiths
Be it……
The Mesopotamian Goddess Innana, Buddhiest Goddess Tara, Egyptian Goddess Isis
Or Goddess Lakshmi-Kali -Jugatdatri….
They are the depiction of HER feminity, power and divinity
Civilizations are formed, made or destroyed
Based on the hands that rocks the cradle
She is the all encompassed creator, that brings sanctity to Life
She is Every Woman in the form of a daughter, wife, mother, professional
She is the supreme being of mystic strength in manifold emotions
Surreal and beautiful when calm
But equally torrential when angered
She is every woman ….the Goddess
Who binds the Universe with Love and Life
Celebrate her and respect her
As she holds the Universe with her tender hands !

**Ms. Shweta Krishnappa**

# ಬಂಟರ ಸಂಘ ಬೆಂಗಳೂರು

## ಸದಸ್ಯತ್ವ ಸಮಿತಿ– 2022–24

ಬೆಂಗಳೂರು ಬಂಟರ ಸಂಘದ ಸದಸ್ಯರಾಗಿದ್ದು, ನಿಮ್ಮ ಮೊಬೈಲ್ ನಂಬರ್ ಹಾಗೂ ವಿಳಾಸದ ಬದಲಾವಣೆ/ ತಿದ್ದುಪಡಿ ಮಾಡಬೇಕಿದ್ದಲ್ಲಿ ಸಂಘದ ಮೊಬೈಲ್ ಸಂಖ್ಯೆ: 7022119739 ಕ್ಕೆ ನೇರವಾಗಿ ವಾಟ್ಸಾಪ್/ ಇನ್‌ಬಾಕ್ಸ್ ಮೆಸೇಜ್‌ಕಳುಹಿಸುವುದರ ಮೂಲಕ ಅಥವಾ ಸಂಘದ ಕಛೇರಿಯನ್ನು ಸಂಪರ್ಕಿಸಿ ಬದಲಾವಣೆ/ ತಿದ್ದುಪಡಿ ಮಾಡಿಸಿಕೊಳ್ಳಬಹುದು.

**ಆನಂದರಾಮ ಶೆಟ್ಟಿ ಬಿ.**
ಗೌರವ ಕಾರ್ಯದರ್ಶಿ

**ಎಂ. ಮುರಲೀಧರ ಹೆಗ್ಡೆ**
ಅಧ್ಯಕ್ಷರು

**ಪಳ್ಳಿ ವಿಶ್ವನಾಥ್ ಶೆಟ್ಟಿ**
ಸಂಚಾಲಕರು, ಸದಸ್ಯತ್ವ ಸಮಿತಿ

**ಶ್ಯಾಮಲಾ ಶೆಟ್ಟಿ**
ಚೇರ್‌ಪರ್ಸನ್, ಸದಸ್ಯತ್ವ ಸಮಿತಿ

ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು ಮತ್ತು ಸದಸ್ಯತ್ವ ಸಮಿತಿ ಸದಸ್ಯರು

# BUNTS' SANGHA R.N.S. VIDYANIKETAN PRE PRIMARY PARENT ORIENTATION PROGRAMME 2023-24

As per the custom of the institution, an Orientation programme was organized by the school for preprimary parents in the Bunts' Sangha Auditorium on 24th of June 2023. The event was presided by the managing committee members-President Shri. Muralidhar Hegde and Hon. Secretary Shri. Anandram Shetty in the presence of Principal Mr.Yesudas L. The chief guest of the day was Ms. Renu Srinivasan, an excellent educator and counsellor, and also a former Principal, Teacher trainer and Academic Auditor of a large group of schools.

Her talk on the journey of parenting was very well accepted and appreciated by the parents who attended the programme.

The Programme started with an invocation by the teachers followed by welcome address by the Principal. After the ceremorial lighting of the lamp, there was a keynote address by the Secretary. Then the guest speaker started her talk on parenting, giving valuable tips to parents. A brief question and answer session also was conducted. The President also addressed the gathering. This was followed by an Orientation of the curriculum and do's & don't's PPT by the Preprimary Co-ordinator, Ms. Sharmila Lawnday. She also introduced the preprimary faculty on stage. The programme culminated with a vote of thanks and the rendering of the national anthem. Refreshments were provided to the parents.










# BUNTS SANGHA RNS VIDYANIKETAN ENVIRONMENT DAY CELEBRATION-2023

"Small Steps, Big Impact: Go Green Today!"

With a motto of 'Invest in plants and enliven our future generations', BSRNS Vidyaniketan celebrated the World Environment day with all its magnanimity on 5th of June, 2023. It was a day that stimulated an awareness of the urgent need of inculcating the practice of the waste management.

The event was graced by Dr. Kumaraswamy, Director of Prakruthi Institute of Environment studies, and a retired Chief Environment officer, as the Chief Guest . He addressed the gathering about the imperative need of waste management in today's environment and also for safeguarding the future generation.

There were many entertaining events from std. 1 to 10th like skit, songs etc. Many completions like fancy dress, speech were held on the same day. There was an interactive session too.

The day embarked a new beginning of upholding a noble cause of saving the environment and our mother earth.



## ಅಭಿನಂದನೆಗಳು

ಟರ್ಕಿಯಲ್ಲಿ ನಡೆದ 8ನೇ ಟರ್ಕಿಷ್ ಓಪನ್ ಕಿಕ್‌ಬಾಕ್ಸಿಂಗ್ ವರ್ಲ್ಡ್ ಕಪ್ ಇಸ್ತನ್‌ಬುಲ್ ಅಂತಾರಾಷ್ಟ್ರೀಯ ಕಿಕ್ ಬಾಕ್ಸಿಂಗ್ ಚಾಂಪಿಯನ್ ಶಿಪ್‌ನಲ್ಲಿ ವಾಕೋ ಇಂಡಿಯಾದಿಂದ ಪ್ರತಿನಿಧಿಸಿದ ಪಾಂಗಾಳದ ಅವಿನಾಶ್ ಕುಮಾರ್ ವಿ. ಶೆಟ್ಟಿಯವರು ಕಂಚಿನ ಪದಕವನ್ನು ಗೆದ್ದಿರುತ್ತಾರೆ. ಇವರು ವಿಶ್ವದ 18ನೇ ರ್‍ಯಾಂಕ್ ಪಟ್ಟಿಯಲ್ಲಿರುವ ಕಿಕ್ ಬಾಕ್ಸರ್ ಆಗಿದ್ದಾರೆ. ಇವರಿಗೆ ಬಂಟರ ಸಂಘದ ಪರವಾಗಿ ಹೃತ್ಪೂರ್ವಕ ಅಭಿನಂದನೆಗಳು.

## ಅಭಿನಂದನೆಗಳು



ದೇಶದ ಪ್ರತಿಷ್ಠಿತ ಏಮ್ಸ [AIIMS] ಮತ್ತು ಇತರ 5 ವೈದ್ಯಕೀಯ ಸಂಸ್ಥೆಗಳ, ಸೂಪರ್ ಸ್ಪೆಷಾಲಿಟಿ ವಿಭಾಗದಲ್ಲಿ ಜುಲೈ 2023ರಿಂದ ಆರಂಭವಾಗುವ MCH ಪದವಿಯ ಪ್ರವೇಶ ಪರೀಕ್ಷೆಯಲ್ಲಿ ರಾಜ್ಯದ ಡಾ॥ ರಜತ್ ಎಸ್ ಶೆಟ್ಟಿ, ಯುರಾಲಜಿ (Urology) ಕ್ಷೇತ್ರದಲ್ಲಿ ಪ್ರಥಮ ಸ್ಥಾನ ಪಡೆದಿರುತ್ತಾರೆ.

ಡಾ॥ ರಜತ್ ಎಸ್. ಶೆಟ್ಟಿ, ಮೈಸೂರ್ ಮೆಡಿಕಲ್ ಕಾಲೇಜಿನಲ್ಲಿ MBBS ಮಾಡಿ, ದೆಹಲಿಯ ರಾಮ ಮನೋಹರ ಲೋಹಿಯ (RML - PGIMER) ವೈದ್ಯಕೀಯ ಸಂಸ್ಥೆಯಲ್ಲಿ ವ್ಯಾಸಂಗ ಮಾಡಿ, 2022 ರಲ್ಲಿ MS ಪದವಿ ಪಡೆದಿರುತ್ತಾರೆ. ಪ್ರಸ್ತುತ ದೆಹಲಿಯ ಪ್ರತಿಷ್ಠಿತ LNJP ಹಾಸ್ಪಿಟಲ್‌ನಲ್ಲಿ ಶಸ್ತ್ರ ಚಿಕಿತ್ಸಕರಾಗಿದ್ದಾರೆ.

ಇವರು ಉಡುಪಿ ಜಿಲ್ಲೆಯ ವಂಡಾರು ಮಾರ್ವಿ ಸದಾಶಿವ ಶೆಟ್ಟಿ ಮತ್ತು. ನೂಜಿ ಮನೆ ಶಾಲಿನಿ ಶೆಟ್ಟಿಯವರ ಪುತ್ರ. ಇವರಿಗೆ ಬೆಂಗಳೂರು ಬಂಟರ ಸಂಘದ ಪರವಾಗಿ ಅಭಿನಂದನೆಗಳು.

# ಬಂಟರ ಸಂಘ ಬೆಂಗಳೂರು – ಮಹಿಳಾ ವಿಭಾಗ
# ಅಂತರಾಷ್ಟ್ರೀಯ ಯೋಗ ದಿನಾಚರಣೆ





ಬೆಂಗಳೂರು ಬಂಟರ ಸಂಘದ ಮಹಿಳಾ ವಿಭಾಗದ ವತಿಯಿಂದ ದಿನಾಂಕ 21.06.2023ರಂದು ಅಂತಾರಾಷ್ಟ್ರೀಯ ಯೋಗ ದಿನಾಚರಣೆಯನ್ನು ಸಂಭ್ರಮದಿಂದ ಆಚರಿಸಲಾಯಿತು. ಸುಮಾರು 35 ಜನ ಮಹಿಳೆಯರು ಯೋಗದಲ್ಲಿ ಪಾಲ್ಗೊಂಡಿದ್ದರು. ಯೋಗ ಶಿಕ್ಷಕಿ ಶ್ರೀಮತಿ ಸರೋಜ ಶೆಟ್ಟಿಯವರು ಯೋಗದ ಮಹತ್ವವನ್ನು ತಿಳಿಸಿದರು ಮತ್ತು ದಿನ ನಿತ್ಯದಲ್ಲಿ ಅಳವಡಿಸಿಕೊಳ್ಳುವ ಕೆಲವು ಆಸನಗಳನ್ನು ಕಲಿಸಿಕೊಟ್ಟರು. ಹಾಗೂ ಧ್ಯಾನವನ್ನು ಮಾಡಿಸಿ ಅದರ ಮಹತ್ವವನ್ನು ತಿಳಿಸಿದರು. ಅಧ್ಯಕ್ಷರಾದ ಶ್ರೀ ಎಂ. ಮುರಲೀಧರ ಹೆಗ್ಡೆಯವರು ಶಿಸ್ತು ಮತ್ತು ಸಮಯ ಪ್ರಜ್ಞೆಯನ್ನು ನಾವು ಅಳವಡಿಸಿಕೊಳ್ಳಲು ತಿಳಿಸಿದರು. ಗೌರವ ಕಾರ್ಯದರ್ಶಿ ಶ್ರೀ ಬಿ. ಆನಂದರಾಮ ಶೆಟ್ಟಿಯವರು ಶುಭಹಾರೈಸಿದರು.

**ಮಾಲತಿ ಜೆ. ಶೆಟ್ಟಿ**
ಚೇರ್‌ಪರ್ಸನ್, ಮಹಿಳಾ ವಿಭಾಗ

# ಅಭಿನಂದನೆಗಳು



ಜುಲೈ ಎರಡನೇ ವಾರದಲ್ಲಿ ದೆಹಲಿಯ ನೊಯ್ಡಾದಲ್ಲಿ ನಡೆಯಲಿರುವ ಕಾಮನ್‌ವೆಲ್ತ್ ರಾಷ್ಟ್ರಗಳ ಭಾರ ಎತ್ತುವ ಸ್ಪರ್ಧೆಯ ತೀರ್ಪುಗಾರರಾಗಿ ಶ್ರೀಮತಿ ಶ್ಯಾಮಲಾ ಶೆಟ್ಟಿಯವರು ಆಯ್ಕೆಯಾಗಿದ್ದಾರೆ. ಇವರು ಬೆಂಗಳೂರು ಬಂಟರ ಸಂಘದ ಜಂಟಿ ಕಾರ್ಯದರ್ಶಿ, ವೈಟ್‌ಲಿಫ್ಟಿಂಗ್ ಫೆಡರೇಷನ್‌ನ ಜಂಟಿ ಕಾರ್ಯದರ್ಶಿ, Karnataka State Weightlifting Associationನ ಖಜಾಂಚಿ, ತುಳುಕೂಟದ ಉಪಾಧ್ಯಕ್ಷೆಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಇವರಿಗೆ ಬಂಟರ ಸಂಘದ ಪರವಾಗಿ ಅಭಿನಂದನೆಗಳು.

ಇವರು ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಭಾಗವಹಿಸಿ ಹಲವಾರು ಪದಕಗಳನ್ನು ಗಳಿಸಿ ತದನಂತರ ಭಾರತ ತಂಡದ ಕೋಚ್ ಆಗಿ ಹಲವಾರು ಬಾರಿ ಭಾರತವನ್ನು ಪ್ರತಿನಿಧಿಸಿದ್ದಾರೆ. ಇವರ ಸಾಧನೆಗೆ ಕರ್ನಾಟಕ ಸರಕಾರದಿಂದ ಏಕಲವ್ಯ ಪ್ರಶಸ್ತಿ ಹಾಗೂ ಜೀವನ ಪರ್ಯಂತ ಸಾಧನೆ ಪ್ರಶಸ್ತಿ ಲಭಿಸಿದೆ.

ಬೆಂಗಳೂರು ಬಂಟರ ಸಂಘದ ಸರ್ವಸದಸ್ಯರ ಪರವಾಗಿ ಇವರಿಗೆ ಅಭಿನಂದನೆಗಳು.

# WORKSHOP BY MRS. MEERA KRISHNAPPA



The English workshop conducted by Mrs. Meera Krishnappa, was exceptional and highly beneficial for teachers. The workshop covered essential aspects of teaching the English language, with a particular emphasis on the importance of improving vocabulary and reading skills. Mrs. Krishnappa strongly encourged teachers to expand their knowledge by reading more books, enabling them to effectively guide their students in the same direction.

Additionally, she provided a valuable session on writing lesson plans, which is crucial for our students' success. Overall, the workshop was incredibly informative, offering numerous valuable insights and takeaways for teachers.

# ಬಂಟರ ಸಂಘ ಬೆಂಗಳೂರು– ಯಕ್ಷಗಾನ ಮತ್ತು ರಂಗ ತರಬೇತಿ ಸಮಿತಿ 2023–24ನೇ ಸಾಲಿನ ಮಕ್ಕಳ ಯಕ್ಷಗಾನ ತರಬೇತಿ ತರಗತಿಯ ಪ್ರಾರಂಭ



ಯಕ್ಷಗಾನ ಮತ್ತು ರಂಗತರಬೇತಿ ಸಮಿತಿಯ ವತಿಯಿಂದ 2023–24ನೇ ಸಾಲಿನ ಮಕ್ಕಳ ಯಕ್ಷಗಾನ ತರಗತಿಯು ಜೂನ್ 25ರಂದು ಬೆಳಿಗ್ಗೆ ಪ್ರಾರಂಭವಾಯಿತು. ಸುಮಾರು 45 ವಿದ್ಯಾರ್ಥಿಗಳು ಯಕ್ಷಗಾನಕ್ಕೆ ಸೇರ್ಪಡೆಯಾದರು. ಮಕ್ಕಳ ತರಗತಿಗಳನ್ನು ಎರಡು ಭಾಗಗಳಾಗಿ ವಿಂಗಡಿಸಲಾಯಿತು. ಬೆಳಿಗ್ಗೆ 9.30ರಿಂದ 11 ಗಂಟೆ ಹಾಗೂ 11 ರಿಂದ 12.30ರವರೆಗಿನ ಸಮಯವನ್ನು ನಿಗದಿಪಡಿಸಲಾಯಿತು. ಯಕ್ಷಗಾನ ತರಬೇತಿಯ ಆರಂಭದ ಸಂದರ್ಭದಲ್ಲಿ ಮಕ್ಕಳು ಮತ್ತು ಪೋಷಕರು ಭಾಗವಹಿಸಿದ್ದರು. ಹೊಸದಾಗಿ ಆಯ್ಕೆಯಾದ ಮಕ್ಕಳ ಯಕ್ಷಗಾನ ತರಬೇತಿಯ ತರಬೇತುದಾರರಾದ ಶ್ರೀ ಸುಬ್ರಾಯ ಹೆಬ್ಬಾರ್ ಹಾಗೂ ಮಹಿಳಾ ಯಕ್ಷಗಾನ ತರಬೇತಿಯ ತರಬೇತುದಾರರಾದ ಶ್ರೀ ಶಿವಕುಮಾರ್ ಬೇಗಾರ್‌ರವರಿಗೆ ಕಾರ್ಯದರ್ಶಿಯವರಾದ ಶ್ರೀ ಬಿ. ಆನಂದರಾಮ ಶೆಟ್ಟಿಯವರು ಹೂ ಗುಚ್ಛ ನೀಡಿ ಶುಭ ಹಾರೈಸಿದರು. ಈ ಸಂದರ್ಭದಲ್ಲಿ ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿಯ ಸದಸ್ಯರು, ಯಕ್ಷಗಾನ ಸಮಿತಿಯ ಸದಸ್ಯರು ಹಾಗೂ ಸಲಹೆಗಾರರು ಉಪಸ್ಥಿತರಿದ್ದರು.

**ಹರಿಪ್ರಸಾದ್ ಶೆಟ್ಟಿ**
ಸಂಚಾಲಕರು,
ಯಕ್ಷಗಾನ ಮತ್ತು ರಂಗ ತರಬೇತಿ ಸಮಿತಿ

**ರಮೇಶ್ ಜಿ. ಶೆಟ್ಟಿ**
ಚೇರ್‌ಪರ್ಸನ್,
ಯಕ್ಷಗಾನ ಮತ್ತು ರಂಗ ತರಬೇತಿ ಸಮಿತಿ

ಬಂಟರ ಸಂಘ ಬೆಂಗಳೂರು

## ಬಂಟರ ಸಂಘ ಬೆಂಗಳೂರು ಮತ್ತು ಚಿನ್ಮಯ ಮಿಷನ್

ಇವರ ಸಂಯುಕ್ತ ಆಶ್ರಯದಲ್ಲಿ

## 'ಗೀತಾಜ್ಞಾನಯಜ್ಞ'

**ಪರಮಪೂಜ್ಯ ಸ್ವಾಮಿ ಬ್ರಹ್ಮಾನಂದ** ಇವರಿಂದ

**ದಿನಾಂಕ: 30.07.2023 ರಿಂದ 06.08.2023, ಸಂಜೆ 6.30 ರಿಂದ 8.00ರವರೆಗೆ**

**ಸ್ಥಳ: ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸಭಾಭವನ**

ಸರ್ವರಿಗೂ ಆದರದ ಸ್ವಾಗತ

**ಆನಂದರಾಮ ಶೆಟ್ಟಿ ಬಿ.**
**ಗೌರವ ಕಾರ್ಯದರ್ಶಿ**

**ಎಂ. ಮುರಲೀಧರ ಹೆಗ್ಡೆ**
**ಅಧ್ಯಕ್ಷರು**

## BUNTS SANGHA RNS VIDYANIKETAN AND COMPOSITE PU COLLEGE

## I PUC INAUGURAL FUNCTION

The first event for the academic year 2023–24, the I PUC Inaugurals, was held on June 5, 2023, in RTB Auditorium by Bunts' Sangha RNS Vidyaniketan and Composite PU College. Sri Muralidhar Hegde, the president of Bunts' Sangha, Bangalore, presided over the occasion. An accomplished educator and motivational speaker named Sri M. Balakrishna Shetty was the day's chief guest. The dignitaries lighted the lamp after the principal's welcome speech, officially kicking off the ceremony. For the complete development of the younger generation, the Chief Guest spoke extensively about the ideals that parents, teachers, and students should uphold. Sri Anandram Shetty, convenor and secretary of Bunts' Sangha Bangalore, gave a speech on the choices kids should make for a successful future. In order to welcome new members, Bunts' Sangha Bangalore President Sri Muralidhar Hegde sent greetings. In order to provide a visual tour of the college, a Power Point presentation was presented. Sri Yesudas, the principal, welcomed his faculty team.

The heartfelt National Anthem and the vote of appreciation brought the ceremony to a close.

ಬಂಟರ ಸಂಘ ಬೆಂಗಳೂರು
BUNTS' SANGHA BANGALORE

# "ವೈದ್ಯಕೀಯ ವಿಭಾಗ ಮತ್ತು ವಿಮೆ"

## "ಉಚಿತ ಸೂಪರ್ ಸ್ಪೆಷಾಲಿಟಿ ಆರೋಗ್ಯ ತಪಾಸಣಾ ಶಿಬಿರ" ಮತ್ತು "ಉಚಿತ ಕಣ್ಣು ತಪಾಸಣೆ ಹಾಗೂ ಕನ್ನಡಕಗಳ ವಿತರಣೆ"

**ದಿನಾಂಕ: 15.08.2023, ಮಂಗಳವಾರ          ಸಮಯ: ಬೆಳಿಗ್ಗೆ 10.00 ರಿಂದ**

**ಸ್ಥಳ: ಬಂಟರ ಸಂಘದ ಆವರಣ**

**ನಗರದ ಪ್ರತಿಷ್ಠಿತ ಆಸ್ಪತ್ರೆಗಳ ಸಹಯೋಗದೊಂದಿಗೆ**

- ಉಬ್ಬಿದ ರಕ್ತನಾಳ (Varicose Vein) ತಪಾಸಣೆ
- ಕ್ಯಾನ್ಸರ್ ತಪಾಸಣೆ
- ನರರೋಗ ತಪಾಸಣೆ ಮತ್ತು ಸಲಹೆ
- ಹೃದಯ ತಪಾಸಣೆ
- ಮಧುಮೇಹ ತಪಾಸಣೆ ಮತ್ತು ಸಲಹೆ
- ಕಣ್ಣು ತಪಾಸಣೆ ಹಾಗೂ ಕನ್ನಡಕಗಳ ವಿತರಣೆ

**ಭಾಗವಹಿಸುವ ಪ್ರತಿಷ್ಠಿತ ಆಸ್ಪತ್ರೆಗಳು:**

BrainS Super Speciality Hospital | Fortis HOSPITAL | NARAYANA NETHRALAYA | ಕರ್ನಾಟಕ ಕ್ಯಾನ್ಸರ್ ಹಾಸ್ಪಿಟಲ್ KARNATAKA CANCER HOSPITAL IMPROVING QUALITY OF LIVE

ONESIGHT EssilorLuxottica Foundation

ಅರ್ಹ ಫಲಾನುಭವಿಗಳಿಗೆ ಉತ್ತಮ ಗುಣಮಟ್ಟದ ಓದುವ ಕನ್ನಡಕಗಳನ್ನು ಒನ್ ಸೈಟ್ ಎಸ್ಸಿಲಾರ್ ಲಕ್ಸೋಟಿಕಾ ಫೌಂಡೇಶನ್ ವತಿಯಿಂದ ವಿತರಿಸಲಾಗುವುದು.

ಸಮಾಜ ಬಾಂಧವರೆಲ್ಲರೂ ಈ ಕಾರ್ಯಕ್ರಮದ ಸದುಪಯೋಗ ಪಡೆದುಕೊಳ್ಳಬೇಕಾಗಿ ವಿನಂತಿ.

**ಆನಂದರಾಮ ಶೆಟ್ಟಿ ಬಿ.**
ಗೌರವ ಕಾರ್ಯದರ್ಶಿ

**ಎಂ. ಮುರಲೀಧರ ಹೆಗ್ಡೆ**
ಅಧ್ಯಕ್ಷರು

**ಚರಣ್‌ರಾಜ್ ಶೆಟ್ಟಿ**
ಸಂಚಾಲಕರು

**ಕೆ. ನಿರಂಜನ್ ಶೆಟ್ಟಿ**
ಚೇರ್‌ಪರ್ಸನ್

**ವೈದ್ಯಕೀಯ ವಿಭಾಗ ಮತ್ತು ವಿಮೆ**

**ವಿಶೇಷ ಸೂಚನೆ : ದಿನಾಂಕ 05.08.2023ರ ಒಳಗೆ ನೋಂದಣಿ ಮಾಡಿಸಿದವರಿಗೆ ಮಾತ್ರ ಉಚಿತ ಕನ್ನಡಕವನ್ನು ನೀಡಲಾಗುವುದು.**

ನೋಂದಣಿ ಹಾಗೂ ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:–

- ► ಕೆ. ನಿರಂಜನ್ ಶೆಟ್ಟಿ – 9620215965
- ► ಚರಣ್‌ರಾಜ್ ಶೆಟ್ಟಿ – 9008973945
- ► ಸತೀಶ್ ಶೆಟ್ಟಿ – 7411212717
- ► ಹೀರಾ ಹೆಗ್ಡೆ – 9611298055
- ► ಬಂಟರ ಸಂಘದ ಕಛೇರಿ – 7022119739

# ಪೊಳಲಿ ಶೀನಪ್ಪ ಹೆಗ್ಗಡೆ ಮತ್ತು ಯಸ್. ಆರ್. ಹೆಗ್ಡೆ ಪ್ರಶಸ್ತಿ ಪ್ರಧಾನ

ಪೊಳಲಿ ಶೀನಪ್ಪ ಹೆಗ್ಗಡೆ ಮತ್ತು ಯಸ್.ಆರ್. ಹೆಗ್ಡೆ ಪ್ರಶಸ್ತಿ ಪ್ರದಾನ ಸಮಾರಂಭ ಇತ್ತೀಚೆಗೆ ಉಡುಪಿಯಲ್ಲಿ ನಡೆಯಿತು. ಯಸ್.ಆರ್. ಹೆಗ್ಡೆ ಚಾರಿಟೇಬಲ್ ಟ್ರಸ್ಟ್ ಈ ಪ್ರಶಸ್ತಿಯ ಪ್ರಾಯೋಜಕರಾಗಿದ್ದರು.

ರಾಷ್ಟ್ರಕವಿ ಸಂಶೋಧನಾ ಕೇಂದ್ರ ಮತ್ತು ಮಣಿಪಾಲ ಅಕಾಡೆಮಿ ಆಫ್ ಹೈಯರ್ ಎಜ್ಯುಕೇಷನ್ ಸಹಯೋಗದಲ್ಲಿ ನಡೆದ ಪ್ರಶಸ್ತಿ ಪ್ರಧಾನ ಸಮಾರಂಭದಲ್ಲಿ ಹಿರಿಯ ಇತಿಹಾಸಕಾರರು, ಸಂಸ್ಕೃತಿ ಚಿಂತಕರು ಭಾಗವಹಿಸಿದ್ದರು. ಪುಂಡಿಕಾಯಿ ಭಟ್ ಅವರು ಮಾತನಾಡುತ್ತಾ ಕೆ.ವಿ. ರಮೇಶ್ ಅವರು ತುಳುನಾಡಿನಲ್ಲಿ ಆಗ ಲಭ್ಯವಿದ್ದ ಶಾಸನಗಳ ಆಧಾರದಿಂದ ತುಳುನಾಡಿನ ಚರಿತ್ರೆಯನ್ನು ಕಟ್ಟಿದ್ದರು. ಅದರಾಚೆಗೆ ದೊರೆತ ಶಾಸನಗಳ ಆಧಾರದಿಂದ ತುಳುನಾಡಿನ ಚರಿತ್ರೆಯನ್ನು ಮರು ರಚಿಸಬೇಕಾಗಿದೆ ಎಂದರು.

ಶೀನಪ್ಪ ಹೆಗ್ಗಡೆಯವರು ಬಂಟ್ವಾಳ ತಾಲೂಕಿನಲ್ಲಿ ಇದ್ದವರು. ಗಣಪತಿ ರಾವ್ ಐಗಳು ಕೂಡಾ ಬಂಟ್ವಾಳದವರೇ. ಆದರೂ ಸಮಕಾಲೀನರಾದ ಶೀನಪ್ಪ ಹೆಗ್ಗಡೆಯವರನ್ನು 1923ರಲ್ಲಿ ಗ್ರಂಥ ಪ್ರಕಟಿಸಿದ ಗಣಪತಿ ರಾವ್ ಐಗಳು 1915ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಚರಿತ್ರೆ ಮತ್ತು ಭೂತಾಳ ಪಾಂಡ್ಯನ ಅಳಿಯ ಕಟ್ಟು ಕೃತಿಯ ಬಗ್ಗೆ ಪ್ರಾಸ್ತಾಪಿಸದೆ ಇರುವುದು ಅಚ್ಚರಿ ಎಂದರು.

ತೆಂಕನಿಡುಂಬೂರು ಕಾಲೇಜಿನ ಪ್ರಾಂಶುಪಾಲರಾದ ಡಾ. ಸುರೇಶ್ ರೈ ಅವರು ಮಾತನಾಡಿ ತುಳುನಾಡಿನ ಇತಿಹಾಸ ರಚನೆಯ ಪಿತಾಮಹ ಎಂದು ಗಣಪತಿರಾವ್ ಐಗಳನ್ನು ಕೆಲವರು ದಾಖಲಿಸಿದ್ದಾರೆ. ಆದರೆ 1915ರಲ್ಲಿ ಶೀನಪ್ಪ ಹೆಗ್ಗಡೆಯವರು ಬರೆದ ದಕ್ಷಿಣ ಕನ್ನಡ ಜಿಲ್ಲೆಯ ಚರಿತ್ರೆಯಲ್ಲಿ ಇರುವ ಹೆಚ್ಚಿನ ಮಾಹಿತಿ ಐಗಳ ಕೃತಿಯಲ್ಲಿ ಇದೆ. ಶೀನಪ್ಪ ಹೆಗ್ಗಡೆಯವರು ತುಳುನಾಡಿನ ಮೊದಲ ಇತಿಹಾಸಕಾರ ಎಂದರು.

ಅತ್ರಾಡಿ ಅಮೃತಾ ಶೆಟ್ಟಿಯವರು ಶೀನಪ್ಪ ಹೆಗ್ಗಡೆ ಮತ್ತು ಯಸ್. ಆರ್. ಹೆಗ್ಗಡೆಯವರ ಬಗ್ಗೆ ಉಪನ್ಯಾಸ ನೀಡಿದರು. ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರದ ಆಡಳಿತಾಧಿಕಾರಿ ಬಿ. ಜಗನ್ನಾಥ ಶೆಟ್ಟಿ ಸ್ವಾಗತಿಸಿದರು. ಚೆಳ್ಯಾರು ಗುತ್ತು ಯಸ್.ಆರ್. ಹೆಗ್ಡೆ ಚಾರಿಟೇಬಲ್ ಟ್ರಸ್ಟ್‌ನ ಅಧ್ಯಕ್ಷರಾದ ಡಾ. ಇಂದಿರಾ ಹೆಗ್ಗಡೆಯವರು ಪ್ರಸ್ತಾವನೆ ಮಾಡಿದರು.

# ಅಭಿನಂದನೆಗಳು



2023 ನೇ ಸಾಲಿನ NEET (National Eligibility Cum Entrance Test) ಪರೀಕ್ಷೆಯಲ್ಲಿ ಕುಮಾರಿ ದೀಪ್ತಾಂಶು ಜ್ಞಾನೇಶ್‌ರವರು 720 (aggregate)ರಲ್ಲಿ 695 ಅಂಕಗಳನ್ನು (AIR 535) ಪಡೆದು ಉತೀರ್ಣರಾಗಿ ಅದ್ವಿತೀಯ ಸಾಧನೆ ಮಾಡಿದ್ದಾರೆ. ಇವರು 2023 ನೇ ಸಾಲಿನ CBSE ಪರೀಕ್ಷೆಯಲ್ಲಿ 96 % ಪಡೆದಿದ್ದು ಅವರು ಓದಿದ Allen Career Institute Bannerghatta Road ಶಾಖೆಯ topper ಆಗಿ ಹೊರಹೊಮ್ಮಿದ್ದಾರೆ.

ಕುಮಾರಿ ದೀಪ್ತಾಂಶು ಜ್ಞಾನೇಶ್‌ರವರು ಸೀತಾನದಿ ಡಾ. ಜ್ಞಾನೇಶ್ ಶೆಟ್ಟಿ ಹಾಗೂ ಬೆಳಪು ಮಾಗಂದಡಿ ಡಾ. ಸೌಮ್ಯ ಶೆಟ್ಟಿಯವರ ಏಕೈಕ ಪುತ್ರಿ. ಇವರು ಹೆಸರಾಂತ ಯಕ್ಷಗಾನ ಕವಿ, ಪ್ರಸಂಗಕರ್ತರಾಗಿದ್ದ ದಿ. ಸೀತಾನದಿ ಗಣಪಯ್ಯ ಶೆಟ್ಟಿಯವರ ಮರಿಮೊಮ್ಮಗಳು ಹಾಗೂ ಚೊಕ್ಕಾಡಿ ಹೊಸಮನೆ ಚಂದ್ರಶೇಖರ ಶೆಟ್ಟಿ, ನಿವೃತ್ತ ಉಪ ತಹಸೀಲ್ದಾರ್‌ರವರ ಮೊಮ್ಮಗಳು. ಇವರ ಸಾಧನೆ ಶ್ಲಾಘನೀಯ ಹಾಗೂ ಪ್ರಶಂಷನೀಯ. ಇವರಿಗೆ ಬೆಂಗಳೂರು ಬಂಟರ ಸಂಘದ ಎಲ್ಲಾ ಸದಸ್ಯರ ಪರವಾಗಿ ಅಭಿನಂದನೆಗಳು.

# Academic Excellence - Congratulations !
# SSLC - 10th Std. Achievers



**Shriya Shetty**
D/o Suddep Shetty &
Kadri Shami Shetty
**ICSE- 98.4%**
**Mathematics - 100,**
**Com. Appli. - 100**
**Carmel School**
**Bengaluru**



**Amulya C. Shetty**
D/o Chandrashekar Shetty
& Malathi C. Shetty
**ICSE- 98%**
**Com. Appli. - 100**
**Maruthi Vidyalaya**
**Bengaluru**



**Shourya Sanjay Rai**
S/o Sanjay Rai &
Akshatha Rai
**ICSE- 98%**
**His, Civis &**
**Geography - 100**
**Vidyashilp Academy,**
**Bengaluru**



**Siri S. Shetty**
D/o Sudhakar Shetty &
Sujatha Shetty
**ICSE- 97.4%**
**Com. Appli. -100**
**Outreach School,**
**Bengaluru**



**J. Navya C. Shetty**
D/o Chandrashekar Shetty
& Ushalatha C. Shetty
**SSLC- 94.88%**
**Kannada - 125**
**Government High School,**
**Basrur**



**Sadvith Shetty**
S/o Sadashiva Shetty
& Smitha Shetty
**CBSE- 93.4%**
**Bunts Sangha RNS**
**Vidyaniketan,**
**Bengaluru**



**Sanvith Shetty**
S/o Mahesh Shetty &
Jayalaxmi
**CBSE- 93.2%**
**Bunts Sangha RNS**
**Vidyaniketan,**
**Bengaluru**



**Shayan U. Shetty**
S/o Uday Kumar Shetty
& Girija Shetty
**SSLC- 90.4%**
**A.V.S. Convent,**
**Thavarekere,**
**Bengaluru**

# BUNTS SANGHA RNS VIDYANIKETAN

## Report on World International Yoga Day

Yoga is skill in action. The word yoga is derived from the Sanskrit word 'yuj' – meaning to **join or to unite**. International Day of Yoga is celebrated on 21st June every year. It aims to aware and inspire people to practice yoga regularly.

BSRNS Vidyaniketan Celebrates and embraces the practice of yoga with enthusiasm, dedication every year. The demonstration was arranged in our school quadrangle. The event was inaugurated by Sri Murlidhar Hegde, the president of Bunts' Sangha, Bengaluru. Shree Yesudas, the Principal of BSRNSV preceded the event. All the heads of the different wings, teachers, students, teaching and non-teaching staff witnessed the program.

The demonstration was arranged in our school quadrangle by the student of ICSE Primary from Class 3 to 5. The demonstration witnessed an impressive turnout, the students actively participated in the event and featured a wide range of Yoga Aasanas and Pranayama.

The students were guided through a series of Postures including standing, sitting, balancing, stretching poses, promoting flexibility, strength and relaxation.

The International Yoga Day demonstration served as a powerful platform to promote the practice of Yoga and its numerous benefits with a diverse and enthusiastic participation. The event successfully highlighted the Universal appeal of Yoga and its ability to foster Physical, Mental and Emotional wellbeing. By embracing Yoga, children develop a healthy lifestyle enhanced their concentration and memory power. The event helped the students to stay in a sense of Unity and Harmony among the children leading to a healthier and happier school community.






ಬಂಟರ ಸಂಘ ಬೆಂಗಳೂರು
BUNTS' SANGHA BANGALORE

# ವಿದ್ಯಾರ್ಥಿವೇತನ ಮತ್ತು ಪ್ರಶಸ್ತಿ ಸಮಿತಿ

**ವಿದ್ಯಾದೀವಿಗೆ ವಿದ್ಯಾರ್ಥಿವೇತನ:–**

1. ಬಂಟರ ಸಂಘ ಬೆಂಗಳೂರು ಇದರ ವಿದ್ಯಾರ್ಥಿವೇತನ ಮತ್ತು ಪ್ರಶಸ್ತಿ ಸಮಿತಿ ವತಿಯಿಂದ 2023 – 24 ನೇ ಸಾಲಿನ ವಿದ್ಯಾದೀವಿಗೆ ವಿದ್ಯಾರ್ಥಿವೇತನಕ್ಕೆ ಅರ್ಜಿಗಳನ್ನು ಆಹ್ವಾನಿಸಿದ್ದು, ಬೆಂಗಳೂರಿನಲ್ಲಿ ವಿದ್ಯಾಭ್ಯಾಸ ಮಾಡುವ ವಾರ್ಷಿಕ ಶುಲ್ಕ ರೂ. 40,000/–ಕ್ಕಿಂತ ಕಡಿಮೆಯಿರುವ 1ನೇ ತರಗತಿಯಿಂದ 10ನೇ ತರಗತಿಯಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳು ಮಾತ್ರ ಈ ಯೋಜನೆಗೆ ಅರ್ಹರು.
2. 2023– 24 ನೇ ಸಾಲಿನ ವಿದ್ಯಾದೀವಿಗೆ ವಿದ್ಯಾರ್ಥಿವೇತನದ ಅರ್ಜಿಗಳನ್ನು ಜುಲೈ 31, 2023 ರವರೆಗೆ ಮಾತ್ರ ಸ್ವೀಕರಿಸಲಾಗುವುದು. ಅರ್ಹ ಅರ್ಜಿಗಳನ್ನು ಪರಿಶೀಲಿಸಿ, ವಿದ್ಯಾರ್ಥಿವೇತನ ಮಂಜೂರು ಮಾಡಲಾಗುವುದು.
3. ಬೆಂಗಳೂರಿನಲ್ಲಿ ವಿದ್ಯಾಭ್ಯಾಸ ಮಾಡುವ ವಾರ್ಷಿಕ ಶುಲ್ಕ ರೂ. 40,000/– ಕ್ಕಿಂತ ಕಡಿಮೆಯಿರುವ ವಿದ್ಯಾರ್ಥಿಗಳು ಮಾತ್ರ ಈ ಯೋಜನೆಗೆ ಅರ್ಹರು.

- ಹೆತ್ತವರ ಬಿ.ಪಿ.ಎಲ್/ ಅಂತ್ಯೋದಯ ಕಾರ್ಡ್‌ನ ಧೃಢೀಕೃತ ಪ್ರತಿ.
- ಶಾಲಾ ಶುಲ್ಕ ರಸೀದಿಯ ಮೂಲ ಪ್ರತಿ / ವಾರ್ಷಿಕ ಶುಲ್ಕದ ವಿವರದ ಧೃಡೀಕೃತ ಪ್ರತಿ.
- ಹಿಂದಿನ ಪರೀಕ್ಷೆಯ ಧೃಢೀಕೃತ ಅಂಕ ಪಟ್ಟಿಯ ಪ್ರತಿ.
- ಸ್ವಂತ ಮನೆ ಹಾಗೂ ಸ್ವಂತ ಉದ್ದಿಮೆ ಹೊಂದಿರುವವರು ಈ ಯೋಜನೆಗೆ ಅರ್ಹರಾಗಿರುವುದಿಲ್ಲ.
- ಆಯ್ಕೆಯ ವಿಚಾರದಲ್ಲಿ ಸಂಘದ ತೀರ್ಮಾನವೇ ಅಂತಿಮ.
- ಅಪೂರ್ಣ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
- ಅರ್ಹ ಅಭ್ಯರ್ಥಿಗಳು ಮಾತ್ರವೇ ಈ ಯೋಜನೆಗೆ ಅರ್ಜಿ ಸಲ್ಲಿಸತಕ್ಕದ್ದು.

ಭರ್ತಿ ಮಾಡಿದ ಅರ್ಜಿಯನ್ನು ಸೂಕ್ತ ದಾಖಲೆಗಳೊಂದಿಗೆ ಸಂಘದ ಕಛೇರಿಯಲ್ಲಿ ಖುದ್ದಾಗಿ / ಪೋಸ್ಟ್ ಮೂಲಕ ದಿನಾಂಕ 31.07.2023ರ ಒಳಗಾಗಿ ಅರ್ಜಿಯನ್ನು ಸಲ್ಲಿಸಬಹುದಾಗಿದೆ.

**ಆನಂದರಾಮ ಶೆಟ್ಟಿ ಬಿ.**
ಗೌರವ ಕಾರ್ಯದರ್ಶಿ

**ಎಂ. ಮುರಲೀಧರ ಹೆಗ್ಡೆ**
ಅಧ್ಯಕ್ಷರು

**ಅಜಿತ್ ಶೆಟ್ಟಿ ಉಳ್ತೂರು**
ಸಂಚಾಲಕರು

**ಸದಾನಂದ ಸುಲಾಯ**
ಚೇರ್‌ಪರ್ಸನ್

ವಿದ್ಯಾರ್ಥಿವೇತನ ಮತ್ತು ಪ್ರಶಸ್ತಿ ಸಮಿತಿ

**ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು ಹಾಗೂ ವಿದ್ಯಾರ್ಥಿ ವೇತನ ಮತ್ತು ಪ್ರಶಸ್ತಿ ಸಮಿತಿ ಸದಸ್ಯರು**


BUNTS' SANGHA RNS
EVENING COLLEGE
(Recognised by the Government of Karnataka, Affiliated to Bangalore University)
No. 324, Bunts' Sangha Complex, Chord Road,
Vijayanagar, Bengaluru - 560 040.
Contact : 080-23398922 / 8217365948
Website: www.bsrnsv.com, E-mail: principalrnsec@gmail.com
COURSES OFFERED
- B.COM
- B.COM INTEGRATED
[CA/ACS/ CMA]
RNS
VIDYANIKETAN
ADMISSIONS
OPEN 2023-24
* Pioneers in Educational Field.
* Limited seats - Individual attention.
* Value added soft skill training and job oriented courses.
* 100% Results is the goal.
* Qualified, dedicated and inspiring faculties.
* Best suited for CA, ACS and CMA aspirants.
* CCTV Camera Surveillance.
* Voluminous Library.
* Spacious Auditorium.
* Hostel facilities available for boys and girls.
* Industrial Visits

# ಕಟೀಲುಶ್ರೀ ದುರ್ಗಾಪರಮೇಶ್ವರಿ ಜ್ಯೋತಿಷ್ಯ ಪೀಠ

**ಪ್ರಧಾನ ತಾಂತ್ರಿಕ ಶ್ರೀ ಶ್ರೀ ವಿಜಯೇಂದ್ರ ಭಟ್**

ದೈವ ಪ್ರಶ್ನೆ ಅಷ್ಟಮಂಗಳ ಪ್ರಶ್ನೆ ಜಾತಕ ಹಸ್ತ ಫೋಟೋ ನೋಡಿ ಸಂಪೂರ್ಣ ಭವಿಷ್ಯವನ್ನು ತಿಳಿಸುತ್ತಾರೆ

**ನಿಮ್ಮ ಸಮಸ್ಯೆ ಏನೇ ಇರಲಿ ಕೇರಳಿಯ ಯಂತ್ರ ಮಂತ್ರ ತಾಂತ್ರಿಕ ವಿಧಿ ವಿಧಾನಗಳಿಂದ ಶ್ರೀ ಕಟೀಲು ದುರ್ಗಾಪರಮೇಶ್ವರಿ ಅನುಗ್ರಹದಿಂದ. 5 ದಿನದಲ್ಲಿ ಶಾಶ್ವತ ಪರಿಹಾರ ಶತಸಿದ್ಧ**



ಶ್ರೀ ಕಟೀಲು ದುರ್ಗಾಪರಮೇಶ್ವರಿ ದೇವಿ ಆರಾಧಕರು

ದೂರದ ಊರಿನವರಿಗೆ ಫೋನ್ ಮೂಲಕ ಪರಿಹಾರ ತಿಳಿಸುತ್ತಾರೆ **99452 22228**

**ಮನೆಯಲ್ಲಿ ಅಶಾಂತಿ ಮಾನಸಿಕ ಕಿರಿಕಿರಿ ವಿದ್ಯಾಭ್ಯಾಸದಲ್ಲಿ ತೊಂದರೆ ಮದುವೆ ಯೋಗ ಬೇಗನೆ ಕೂಡಿಬರಲು ಸ್ತ್ರೀ ಪುರುಷ ಪ್ರೇಮ ಆಕರ್ಷಣ ಸಿದ್ಧಿ ದೂರವಾಗಿರುವ ಪತಿ ಪತ್ನಿ ಒಂದಾಗಲು ಡೈವರ್ಸ್ ಸಮಸ್ಯೆ ಸಂತಾನ ಲೈಂಗಿಕ ದೋಷ ಹಣಕಾಸಿನ ಸಮಸ್ಯೆಯಿಂದ ಮುಕ್ತಿ ಪಡೆಯಲು ಶತ್ರುಗಳು ಮೆತ್ತಗಾಗಿ ಮೂಲೆ ಸೇರಲು ಉದ್ಯೋಗ ವ್ಯಾಪಾರದಲ್ಲಿ ಪ್ರಗತಿ ಹೊಂದಲು ಮಾಟ ಮಂತ್ರ ವಶೀಕರಣ ನಿವಾರಣೆ ಅತ್ತೆ ಸೊಸೆ ಕಲಹ ಅದೃಷ್ಟ ಪ್ರಾಪ್ತಿ ಸಮಸ್ಯೆ ಯಾವುದೇ ಇರಲಿ ಪರಿಹಾರ ಶತಸಿದ್ಧ**

ಸ್ಥಳ:-ಕೆ ಎಸ್ ರಾವ್ ರೋಡ್, ಮಂಗಳೂರು ಹಾಗು ಡಿವಿಜಿ ರೋಡ್ ಬೆಂಗಳೂರು

ADVT.

"ಎಲ್ಲರಿಗೂ ಶಿಕ್ಷಣ, ಎಲ್ಲರಿಗೂ ಮನೆ"

# ಮಾತಾ ಗೃಹ ನಿರ್ಮಾಣ ಕೋ-ಆಪರೇಟಿವ್ ಸೊಸೈಟಿ (ಲಿ.)

ನೋಂದಣಿ ಸಂಖ್ಯೆ : 41252

ಪ್ರಧಾನ ಕಛೇರಿ : 2ನೇ ಮಹಡಿ, ತಾರಾ ಟವರ್ಸ್, ಸುರತ್ಕಲ್, ಮಂಗಳೂರು – 575014

Ph: 78 99 91 79 66 / 72 59 20 99 66 / 99 80 71 19 66

mathagruhanirman18@gmail.com

**ನಿರಖು ಠೇವಣಿ (FD) ಗೆ ಆಕರ್ಷಕ ಬಡ್ಡಿ ದರ**

ನಿರಖು ಠೇವಣಿ (FIXED DEPOSIT) ಗೆ

12 ತಿಂಗಳ ಅವಧಿಗೆ ಶೇಕಡಾ 10 ರಂತೆ ಬಡ್ಡಿ ದರ ನೀಡಲಾಗುವುದು.

**ಸುಲಭ ಬಡ್ಡಿದರದಲ್ಲಿ ಗೃಹಸಾಲ ಮತ್ತು ವಿದ್ಯಾಭ್ಯಾಸ ಸಾಲ ಯೋಜನೆ**

ನಿಮ್ಮ ಜಾಗದಲ್ಲಿ ವಾಸ್ತು ವಿನ್ಯಾಸದ ಗೃಹ ನಿರ್ಮಾಣವನ್ನು ಗೃಹ ಸಾಲ ಸೌಲಭ್ಯದೊಂದಿಗೆ ಮಾಡಿ ಕೊಡಲಾಗುವುದು





**ವಾಸ್ತು ವಿನ್ಯಾಸದಲ್ಲಿ ನಿರ್ಮಿಸಿದ ಕಡಿಮೆ ದರದ ಮನೆಗಳು ಮಾರಾಟಕ್ಕಿವೆ**

*ಷರತ್ತುಗಳು ಅನ್ವಯಿಸುತ್ತದೆ

**Ph: 72 59 20 99 66 / 70 22 48 16 66**

ADVT.

# ಶ್ರದ್ಧಾಂಜಲಿ



ಶ್ರೀ ಶಶಿಕಾಂತ ಕುಮಾರ್ ಶೆಟ್ಟಿ
ಸದಸ್ಯತ್ವ ಸಂಖ್ಯೆ : LM015283

ಕೆರಾಡಿ ಶ್ರೀ ಶಶಿಕಾಂತ ಕುಮಾರ್ ಶೆಟ್ಟಿಯವರು ದಿನಾಂಕ 29.05.2023ರಂದು ತಮ್ಮ 25ನೇ ವಯಸ್ಸಿನಲ್ಲಿ ನಿಧನರಾದರು. ಇವರು ತಮ್ಮ ತಂದೆ, ತಾಯಿ, ಓರ್ವ ಸಹೋದರ ಹಾಗೂ ಬಂಧು–ಬಳಗವನ್ನು ಅಗಲಿರುತ್ತಾರೆ. ಸಂಘದ ಸರ್ವ ಸದಸ್ಯರು ಇವರ ಆತ್ಮಕ್ಕೆ ಚಿರಶಾಂತಿ ಕೋರಿ ಸಂತಾಪ ಸೂಚಿಸಿರುತ್ತಾರೆ.



ಶ್ರೀ ಆನಂದ ಶೆಟ್ಟಿ ಕೆ
ಸದಸ್ಯತ್ವ ಸಂಖ್ಯೆ: CL011857

ಕೊಲ್ಲೂರು ಶ್ರೀ ಕೆ. ಆನಂದ ಶೆಟ್ಟಿಯವರು ದಿನಾಂಕ 14.05.2023ರಂದು ತಮ್ಮ 52ನೇ ವಯಸ್ಸಿನಲ್ಲಿ ನಿಧನರಾದರು. ಇವರು ತಮ್ಮ ಪತ್ನಿ ಕೊರ್ಗಿ ಶ್ರೀಮತಿ ಆಶಾ ಶೆಟ್ಟಿ, ಇಬ್ಬರು ಪುತ್ರಿಯರು ಹಾಗೂ ಬಂಧು–ಬಳಗವನ್ನು ಅಗಲಿರುತ್ತಾರೆ. ಸಂಘದ ಸರ್ವ ಸದಸ್ಯರು ಇವರ ಆತ್ಮಕ್ಕೆ ಚಿರಶಾಂತಿ ಕೋರಿ ಸಂತಾಪ ಸೂಚಿಸಿರುತ್ತಾರೆ.



ಶ್ರೀ ಸಂತೋಷ್ ಕುಮಾರ್ ಶೆಟ್ಟಿ ಕೆ
ಸದಸ್ಯತ್ವ ಸಂಖ್ಯೆ: CL004679

ಕರ್ನಾಟಕ ಉಚ್ಛ ನ್ಯಾಯಾಲಯದ ಹಿರಿಯ ನ್ಯಾಯವಾದಿ ಕವತಾರು ಬಾಲಗುತ್ತು ಶ್ರೀ ಕೆ. ಸಂತೋಷ್ ಕುಮಾರ್ ಶೆಟ್ಟಿಯವರು ದಿನಾಂಕ 09.06.2023ರಂದು ತಮ್ಮ 70ನೇ ವಯಸ್ಸಿನಲ್ಲಿ ನಿಧನರಾದರು. ಇವರು ತಮ್ಮ ಪತ್ನಿ ಪುತ್ತೂರು ಶ್ರೀಮತಿ ಪ್ರಭಾ ಎಸ್. ಶೆಟ್ಟಿ, ಓರ್ವ ಪುತ್ರಿ, ಓರ್ವ ಸಹೋದರ ಹಾಗೂ ಬಂಧು–ಬಳಗವನ್ನು ಅಗಲಿರುತ್ತಾರೆ. ಸಂಘದ ಸರ್ವ ಸದಸ್ಯರು ಇವರ ಆತ್ಮಕ್ಕೆ ಚಿರಶಾಂತಿ ಕೋರಿ ಸಂತಾಪ ಸೂಚಿಸಿರುತ್ತಾರೆ.




ಶ್ರೀ ರಾಜೀವ್ ಶೆಟ್ಟಿ
ಸದಸ್ಯತ್ವ ಸಂಖ್ಯೆ: CL007335

ಅಲ್ತಾರು ದೊಡ್ಡಮನೆ ಶ್ರೀ ರಾಜೀವ್ ಶೆಟ್ಟಿಯವರು ದಿನಾಂಕ 18.06.2023ರಂದು ತಮ್ಮ 60ನೇ ವಯಸ್ಸಿನಲ್ಲಿ ನಿಧನರಾದರು. ಇವರು ಓರ್ವ ಪುತ್ರಿ, ಓರ್ವ ಮೊಮ್ಮಗಳು, ಓರ್ವ ಸಹೋದರಿ, ಓರ್ವ ಸಹೋದರ ಹಾಗೂ ಬಂಧು–ಬಳಗವನ್ನು ಅಗಲಿರುತ್ತಾರೆ. ಸಂಘದ ಸರ್ವ ಸದಸ್ಯರು ಇವರ ಆತ್ಮಕ್ಕೆ ಚಿರಶಾಂತಿ ಕೋರಿ ಸಂತಾಪ ಸೂಚಿಸಿರುತ್ತಾರೆ.



ಶ್ರೀ ಶಾಂತರಾಮ ಶೆಟ್ಟಿ ಕೆ
ಸದಸ್ಯತ್ವ ಸಂಖ್ಯೆ: CL004978

ವಿಜಯಾ ಬ್ಯಾಂಕಿನ ನಿವೃತ್ತ ಅಧಿಕಾರಿ ಹಿರಿಯಡ್ಕ ಕೋಲ್ಯಾರು ಶ್ರೀ ಕೆ. ಶಾಂತರಾಮ ಶೆಟ್ಟಿಯವರು ದಿನಾಂಕ 26.06.2023ರಂದು ತಮ್ಮ 78ನೇ ವಯಸ್ಸಿನಲ್ಲಿ ನಿಧನರಾದರು. ಇವರು ತಮ್ಮ ಪತ್ನಿ ಕುರಿಯಾಳಗುತ್ತು ಶ್ರೀಮತಿ ದೀನಮಣಿ ಎಸ್. ಶೆಟ್ಟಿ, ಓರ್ವ ಪುತ್ರ, ನಾಲ್ವರು ಸಹೋದರಿಯರು, ಇಬ್ಬರು ಸಹೋದರರು ಹಾಗೂ ಬಂಧು–ಬಳಗವನ್ನು ಅಗಲಿರುತ್ತಾರೆ. ಸಂಘದ ಸರ್ವ ಸದಸ್ಯರು ಇವರ ಆತ್ಮಕ್ಕೆ ಚಿರಶಾಂತಿ ಕೋರಿ ಸಂತಾಪ ಸೂಚಿಸಿರುತ್ತಾರೆ.


PILGRIMAGE TOUR TO
VARANASI - PRAYAGRAJ - AYODHYA
4 NT/ 5 DAYS TOUR TO
From 1st november to 5th november 2023
HIGHLIGHTS : Varanasi - Kashi Vishwanath Temple, Holy Ganga Ghats Banaras, Hindu University Sarnath, Kala Bhairav Temple. Prayagraj - Triveni Sangam, Sita Madi. Ayodhaya - Ram Mandir, Tulasi Smarak, Nageshwarnath Temple, Kanak Bhavan.
PACKAGE COST INR 38800/- PER PERSON - ALL INCLUSIVE - EX-MUMBAI
Cost Includes : To & Fro Airfare from Mumbai (BOM-VNS/ LKO-BOM). Accommodation: 2Nt Varanasi, 1Nt Prayagraj, 1Nt Ayodhya with all meals. All transfers & sightseeing by AC Coach. Group accompanied by experienced Tour Manager. Cost excludes: All expenses of personal nature.
For any further details please contact:
IATA Approved
Canara Tours & Travels Pvt. Ltd
....... GOOD PEOPLE TO TRAVEL WITH
Mr. S. B. Shetty – 9820510043
101, Udyog Kshetra, L.B.S. Marg, Off Link Road, Mulund (W), Mumbai-80. | Tel.: 41115000 | Fax : 41115005
Mr. T. T. Mada – 9820632934
2, Srishti Complex, Opp. L & T Gate No.7, Saki Vihar Rd., Powai, Mumbai-72. Tel. : (022) 42215000
Fax : 91-22-28571468 E-mail : info@canaratravels.com | Website : www.canaratravels.com
Mr. Prabhat Shetty - 9481950340
204, Kirthi Sagar, Vidyaratnanagar Manipal - 576104
Mr. Varun Mallya - 9480744833
G/3, Inland Ornate Opp. Ocean Pearl, Navabharath Circle, Kodialbail, Mangalore-575003 Tel.: 0824-4258505/06
ADVT.

ಸ್ಥಾಪನೆ: 1997

ದೂರವಾಣಿ : 23393444
ಮೊಬೈಲ್ : 8722006082

# ವಿಜಯ ಪತ್ತಿನ ಸೌಹಾರ್ದ ಸಹಕಾರಿ ನಿಯಮಿತ
# Vijaya Pathina Souharda Sahakari Niyamitha

ನಂ 5, ಎಸ್.ಜಿ. ಎಲಿಗೆನ್ಸ್, 4ನೇ ಮಹಡಿ, ಚಂದ್ರ ಲೇಔಟ್ ಮುಖ್ಯ ರಸ್ತೆ, ಇನ್‌ಕಮ್‌ಟ್ಯಾಕ್ಸ್ ಲೇಔಟ್, ವಿಜಯನಗರ, ಬೆಂಗಳೂರು – 560 040.
**Email : vijaya_souharda@yahoo.in, vijayasouharda@rediffmail.com**

## ವಿಜಯ ಪತ್ತಿನ ಸೌಹಾರ್ದ ಸಹಕಾರಿ – ಪ್ರಗತಿ ಪಥದತ್ತ

ಸಹಕಾರಿಯು ಸುಸ್ಥಿರ ಬೆಳವಣಿಗೆಯತ್ತ ಸಾಗುತ್ತಿದ್ದು, 25 ಸಂವತ್ಸರಗಳನ್ನು ಮುಗಿಸಿರುವುದು ಸಂತೋಷದಾಯಕ. ನಿಶ್ಚಿತ ಠೇವಣಿಗಳಿಗೆ ಆಕರ್ಷಕ ಬಡ್ಡಿ ದರವನ್ನು ನೀಡಲಾಗುತ್ತಿದೆ. ಷೇರುಗಳನ್ನು ಖರೀದಿಸಿ ಸಹಕಾರಿಯ ಸದಸ್ಯರಾಗುವ ಮೂಲಕ ವಿವಿಧ ಠೇವಣಿ, ಸಾಲ ಸೌಲಭ್ಯವನ್ನು ಪಡೆದುಕೊಳ್ಳಬಹುದು. ಪಿಗ್ಮಿ ಸಂಗ್ರಹಣಾ ವ್ಯವಸ್ಥೆ ಕಲ್ಪಿಸಲಾಗಿದೆ. ಇವುಗಳ ಸದುಪಯೋಗವನ್ನು ಎಲ್ಲರೂ ಪಡೆದುಕೊಳ್ಳುವಂತೆ ಕೋರಲಾಗಿದೆ.

### ಸಾಲಗಳು

- ಜಾಮೀನು ಸಾಲ : ರೂ. 50,000.00
- ವಾಹನ ಸಾಲ : 1 ಲಕ್ಷದಿಂದ 10 ಲಕ್ಷ – 24 ತಿಂಗಳಿನಿಂದ 36 ತಿಂಗಳವರೆಗೆ
- ವ್ಯಾಪಾರ ಸಾಲ : 1 ಲಕ್ಷದಿಂದ 20 ಲಕ್ಷ
- ಗೃಹ ನಿರ್ಮಾಣ ಸಾಲ ಮತ್ತು ನಿವೇಶನ ಖರೀದಿ ಸಾಲ : 1 ಲಕ್ಷದಿಂದ 60 ಲಕ್ಷ – 120 ತಿಂಗಳು ಗರಿಷ್ಠ

**ಸಾಲದ ಬಡ್ಡಿ ದರ : 1 ಲಕ್ಷದವರೆಗೆ 14%, 1 ಲಕ್ಷ ಮೇಲ್ಪಟ್ಟು 13%**

2016–17 ರಿಂದ ಸತತವಾಗಿ 15% ಹಾಗೂ 2020 –2021ರಲ್ಲಿ 12% ಮತ್ತು 2021–2022 ರಲ್ಲಿ 13%
ವಾರ್ಷಿಕ ಡಿವಿಡೆಂಡ್ ವಿತರಣೆ
ಪ್ರಗತಿಗೆ ಕೈ ಜೋಡಿಸಿ ಸಹಕಾರಿ ಕ್ಷೇತ್ರದಲ್ಲಿ ಅದ್ಭುತ ಸಾಧನೆಗೆ ಸಹಕರಿಸಿ

**ವ್ಯವಹಾರದ ವೇಳೆ :**

| | ಬೆಳಿಗ್ಗೆ | ಸಾಯಂಕಾಲ |
|---|---|---|
| ಸೋಮವಾರದಿಂದ ಶುಕ್ರವಾರದವರೆಗೆ | 9–30 ರಿಂದ 1–00 | 2–00 ರಿಂದ 6–00 |
| ಶನಿವಾರ | 9–30 ರಿಂದ 1–00 | ರಜಾ |
| ಭಾನುವಾರ | ವಾರದ ರಜಾ ದಿನ | |

**ನಿರ್ದೇಶಕರುಗಳು**

ಶ್ರೀ ಕೆ. ಭಗವಾನ್‌ದಾಸ್ ರೈ
ಶ್ರೀ ಡಿ. ಚಂದ್ರಹಾಸ್ ರೈ
ಶ್ರೀ ಟಿ. ಎನ್. ಶಿವಾನಂದ ಶೆಟ್ಟಿ
ಶ್ರೀಮತಿ ಸರ್ವಾಣಿ ಜಿ. ರೈ
ಶ್ರೀ ಬಿ. ಸಂತೋಷ್ ಕುಮಾರ್ ಶೆಟ್ಟಿ
ಶ್ರೀ ಕೆ. ಪ್ರಮೋದ್‌ಚಂದ್ರ ಭಂಡಾರಿ
ಶ್ರೀಮತಿ ಮಂಜುಳಾ ಎಸ್. ಶೆಟ್ಟಿ

ಕಾರ್ಯದರ್ಶಿ – ಶ್ರೀ ಕೆ. ಆರ್. ಶೇಷಾದ್ರಿ

**ಸ್ಥಾಪಕ ಅಧ್ಯಕ್ಷರು : ದಿ. ಡಾ|| ಐ. ವಿ. ಶೆಟ್ಟಿ**

**ಶ್ರೀ ಇರ್ಮಾಡಿ ಜಯಪ್ರಸಾದ್ ಶೆಟ್ಟಿ**
**ಅಧ್ಯಕ್ಷರು**

**ಶ್ರೀ ಹೆಚ್. ಶ್ರೀಧರ್ ಹೆಗ್ಡೆ**
**ಉಪಾಧ್ಯಕ್ಷರು**

ADVT.




**Kirthi Palmville** is located within the heart of **UDUPI,** yet away from the hustle and bustle of the town, it's a calm and serene ambience. It's a fusion of ultra-modern, high tech living style and traditional culture of home life. The **Palmville** includes a Swimming Pool, Independent Club House, Gymnasium, Kids zone, Multipurpose court, Mini Tree forest and a tree house, Walking track and Children's play area. If you love nature, this is the place to revel in it.

Project Promoted by

**Kirthi CONSTRUCTION**

**SAMPLE FLAT READY**

Call for an appointment

99452 71353 | 81971 40844

www.kirthiconstruction.com

ADVT.

3rd Floor, Maithri Complex, Udupi - 576101 | Tele: +91 820 2530655 | email: enquiry@kirthiconstruction.com

REGISTERED KA/BGW-1589/2021-2023 RNI NO : KARBIL/2005/16402, Date of Publication 07-07-2023.
Licenced post without prepayment License No. PMG BG /WPP-219/2021-2023, Total No. of Pages 24+4=28
Licensed to post at Bengaluru PSO, Mysore Road, Bengaluru - 560026, on 10th or 12th of every Month




Printed and Published by : Sri Anandram Shetty B. on behalf of Bunts' Sangha Bangalore.
# 324, Bunts' Sangha Complex, Chord Road, Vijayanagar, Bengaluru - 560040. Editor : Aravind Shetty M.
Printed at Poornima Printers, # 3 & 4, Sy. No. 51 / 14, Chowdeshwarinagar, Pipe Line Road, Laggere, Bengaluru - 560 058. Phone : 080 - 23359588 | 23351210.